7

# ಬೈಬಲಿನಲ್ಲಿ ಅದ್ಭುತ ಕಾರ್ಯಗಳು

ದೇವರ ಪ್ರೇರಣೆಯ ಪುಸ್ತಕವೆಂದು ಬೈಬಲನ್ನು ತಿರಸ್ಕರಿಸುವದಕ್ಕೆ ಒಂದು ಸಾಮಾನ್ಯ ನೆಪವು, "ಅದು ಅದ್ಭುತ ಕಾರ್ಯಗಳಿಂದ ತುಂಬಿರುವುದು" ಎಂಬುದು. ಈ ಕಾರಣದಿಂದ, ಬೈಬಲಿನ ದೈವ ಪ್ರೇರಣೆ ಹಾಗೂ ಅಧಿಕಾರದ ನಮ್ಮ ಅಧ್ಯಯನವು ಅದ್ಭುತ ಕಾರ್ಯಗಳ ಚರ್ಚೆ ಯಿಲ್ಲದೇ ಪರಿಪೂರ್ಣವಾಗುವದಿಲ್ಲ. ಬೈಬಲಿನಲ್ಲಿ ಅದ್ಭುತ ಕಾರ್ಯಗಳನ್ನು ವಿವರಿಸಲು ಪರಿಶುದ್ಧಾತ್ಮನಿಂದ ಅತೀ ಹೆಚ್ಚಾಗಿ ಉಪಯೋಗಿಸಿದ ಪದ "ಅದ್ಭುತ" wonder ಸಾಮಾನ್ಯವಾದ ನಿಸರ್ಗವು ತಾನೇ ಒಂದು ಅದ್ಭುತವಾಗಿರುವಾಗ, ವಿಪುಲ ವಾದ ಉದಾಹರಣೆಗಳು, ನಿಸರ್ಗದ ಸಹಜ ನಿಯಮಗಳಿಗೆ ವಿರುದ್ಧವಾಗಿ ದೇವರಿಂದ ಕಾರಣವಾದ ಅದ್ಭುತಗಳು ಬೈಬಲಿನಲ್ಲಿವೆ. ಈ ಅದ್ಭುತಗಳು ಕ್ರೈಸ್ತವ ಆಧಿಕೃತಗೆ ಪುರಾವೆಗಳಾಗಿವೆ. ಇವು ಮಾನವನ ಶಕ್ತಿ ಸಾಮರ್ಥ್ಯಕ್ಕೆ ಅತೀತವಾಗಿವೆ. ಅವು ದೇವರ ಶಕ್ತಿಯ ಸಾಮಾನ್ಯ ಕಾರ್ಯಾಚರಣೆಗಳಿಂದ ದೃಶ್ಯವಾಗಿ ಕ್ರಮವಾದ ದೇವರ ಕೃತ್ಯವಾಗಿದೆ ಎಂದು ಉದಾಹರಣೆಯಿಂದ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ: ಮೋಶೆಯು ಐಗುಪ್ತದಲ್ಲಿ, ಕೆಂಪು ಸಮುದ್ರದ ಬಳಿಯಲ್ಲಿ ಮತ್ತು ಅರಣ್ಯದಲ್ಲಿ ಏನು ಮಾಡಿದನು; ಉರಿಯುವ ಕುಲುಮೆಯಲ್ಲಿ ಹಾಗೂ ಸಿಂಹದ ಗವಿಯಲ್ಲಿ ದೇವರ ಸೇವಕರ ಅನುಭವಗಳು; ಯೇಸು ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದ್ದು; ಆತನು ತಕ್ಷಣವೇ ವಾಸಿಮಾಡಿದ್ದು ಮತ್ತು ಆತನು ಸತ್ತವರನ್ನು ಎಬ್ಬಿಸಿದ್ದು; ರೊಟ್ಟಿಯನ್ನು ಮೀನನ್ನೂ ಹೆಚ್ಚಾಗುವಂತೆ ಮಾಡಿದ್ದು; ಆತನ ಶಿಷ್ಯರು ಸರ್ಪಗಳನ್ನು ಕೈಗಳಲ್ಲಿ ಹಿಡಿದದ್ದು, ಇತ್ಯಾದಿಗಳು.

ಬೈಬಲಿನ ಅದ್ಭುತ ಕಾರ್ಯಗಳನ್ನು ತಾರ್ಕಿಕಾಧಾರದಿಂದ ವಿವರಿಸುವ ಪ್ರಯತ್ನವು ಇಲ್ಲವೇ ಬೈಬಲಿನ ಅದ್ಭುತ ಕಾರ್ಯವನ್ನು ಕೇವಲ ಪ್ರಭಾವಿತ ಪುನಃ ಶಾಸ್ತ್ರವೆಂದು ಚಿತ್ರಿಸುವುದು ಹಸಿದ ಸಾವಿರಾರು ಜನರಿಗೆ ಊಟಬಡಿಸುದ್ದನ್ನು ಇಲ್ಲವೇ ಲಾಜರನು ಜೀವಿತನಾಗಿ ಹಿಂದಿರುಗಿ ಬಂದದ್ದನ್ನು ವಿವರಿಸಲು ಸಾಕಷ್ಟಾಗುವದಿಲ್ಲ. ಅಂಥ ಬೈಬಲ್ ಅದ್ಭುತಗಳು ಐತಿಹಾಸಿಕ ಸಂಗತಿಗಳು ಇಲ್ಲವೇ ಕಾಲ್ಪನಿಕ ವಿವರಣೆಗಳು ಎಂದು ಒಬ್ಬರು ಹೇಳಬೇಕಾಗುತ್ತದೆ. ಬೈಬಲಿನ ಅದ್ಭುತಕಾರ್ಯಗಳು, ತಮ್ಮ ವ್ಯವಹಾರಿಕ ಪರಿಣಾಮ ಗಳೊಂದಿಗೆ, ದೈವಿಕ ಸಂದೇಶವನ್ನು ಅಧಿಕೃತಗೊಳಿಸಲು ರೂಪಿಸಲ್ಪಟ್ಟವು. ಅವು ಮೋಶೆಗಾಗಿ, ಕ್ರಿಸ್ತನಿಗಾಗಿ ಹಾಗೂ ಅಪೊಸ್ತಲರಿಗಾಗಿ ಯೋಗ್ಯತಾಪತ್ರಗಳಾಗಿದ್ದವು.

## ಅದ್ಭತ ಕಾರ್ಯಗಳನ್ನು ತಿರಸ್ಕರಿಸಲು ಮಾನವ ತಳಹದಿ

ಅದ್ಭುತ ಕಾರ್ಯಗಳನ್ನು ವಿವರಿಸಲು ಮನಃ ಶಾಸ್ತ್ರದಿಂದ ಒತ್ತಾಯ ಪೂರ್ವಕ ವಾಗಿ, ಸಾಕಾಗದಿರುವ ಪ್ರಯತ್ನದ ಬಗ್ಗೆ ಮೇಲೆ ಉಲ್ಲೇಖಿಸಲಾಗಿದೆ. ಬೈಬಲಿನ ಅದ್ಭುತಕಾರ್ಯಗಳ ಹಾಗೂ ನೈಸರ್ಗಿಕ ನಿಯಮಗಳ ಮಧ್ಯದಲ್ಲಿಯ ಅಂತರವನ್ನು ಮುಚ್ಚಲು ಅಂಥ ಪ್ರಯತ್ನವಾಗಿದೆ. ಹೀಗಿದ್ದರೂ, ಬಹಳ ಹೆಚ್ಚಾದ ಅವಿಶ್ವಾಸಿಗಳು,

ಬೈಬಲಿನ ವಿವರಣೆಗಳು ಸುಳ್ಳಾಗಿವೆಯೆಂದು ಸುಮ್ಮನೇ ಯೋಚಿಸುತ್ತಾರೆ. "ಅದ್ಭುತ ಕಾರ್ಯಗಳು ಪ್ರಾರಂಭವಾಗುವಾಗ, ಚರಿತ್ರೆಯು ಮುಕ್ತಾಯಗೊಳ್ಳುತ್ತದೆ" ಎಂದು ಅವರು ಒಪ್ಪಿಕೊಳ್ಳುತ್ತಾರೆ. ಅದ್ಭುತಕಾರ್ಯಗಳ ಅಸಾಧ್ಯತೆಯನ್ನು ಅವರು ಕಲ್ಪಿಸಿ ಕೊಳ್ಳುತ್ತಾರೆ. ಅದ್ಭುತ ಕಾರ್ಯಗಳ ವಾಸ್ತವಿಕತೆಗೆ ವಿರೋಧವಾಗಿ ಅವರು ಮೂರು ಮುಖ್ಯವಾದ ಆಕ್ಷೇಪಣೆಗಳನ್ನು ಮುಂದಿಡುತ್ತಾರೆ: (1) "ಯಾವುದೇ ಸಾಕ್ಷಿಯು ಅದ್ಭುತ ಕಾರ್ಯವನ್ನು ಸಿದ್ಧಪಡಿಸಿ ತೋರಿಸುವದಿಲ್ಲ," (2) "ಸೃಷ್ಟಿಯಲ್ಲಿಯ ಏಕರೂಪತೆಯ ವೈಜ್ಞಾನಿಕ ನಿಯಮವು ಅದ್ಭುತಕಾರ್ಯವನ್ನು ಅಸಾಧ್ಯವಾಗಿ ಮಾಡುತ್ತದೆ" ಹಾಗೂ (3) "ವಿಗ್ರಹಾರಾಧಿಕರಿಂದ ಮತ್ತು ಇತರರಿಂದ ಅದ್ಭುತಕಾರ್ಯಗಳ ಬಗ್ಗೆ ಮಾಡಿದ ಹೇಳಿಕೆಗಳು ಬೈಬಲಿನ ಹೇಳಿಕೆಗಳಂತೆ ನ್ಯಾಯ ಸಮ್ಮತವಾಗಿದೆ."

### "ಯಾವುದೇ ಸಾಕ್ಷಿಯು ಅದ್ಭುತ ಕಾರ್ಯವನ್ನು ಸಿದ್ಧಪಡಿಸಿ ತೋರಿಸಲಾರದು"

ಸ್ಕೊಟಿಶ್ ನಾಸ್ತಿಕ ಡೇವಿಡ್ ಹ್ಯೂಮ್ (1711-76) ಎಂಬವನು ಸಾಕ್ಷಿಯು ಎಷ್ಟೇ ಪ್ರಶಂಸನೀಯವಾಗಿದ್ದರೂ ಯಾವುದೇ ಸಾಕ್ಷಿಯು ಅದ್ಭುತ ಕಾರ್ಯವನ್ನು ಸಿದ್ಧಪಡಿಸಿ ತೋರಿಸಲಾರದು ಎಂದು ಹೇಳಿದನು. ಅದ್ಭುತಗಳನ್ನು ಅವರು ಚರ್ಚೆಗಿಂತ ಹೆಚ್ಚಾಗಿ ಪರಿಹಾಸ್ಯಕ್ಕಾಗಿರುವ ವಿಷಯವೆಂದು ಯೋಚಿಸಿದರು.[1] ಹೀಗಿದ್ದರೂ ಹ್ಯೂಮನು ಅಂಥ ಏಕಪಕ್ಷ ಸ್ಥಾನವನ್ನು ತೆಗೆದು ಕೊಂಡದ್ದು ನಂಬಲರ್ಹ ಸಾಕ್ಷಿಯ ಬೆಲೆಯ ಮೇಲೆ ಜಗತ್ತಿನ ಅಭಿಪ್ರಾಯಕ್ಕೆ ವಿರುದ್ಧವಾದದ್ದಾಗಿದೆ. ಜಗತ್ತಿನ ನ್ಯಾಯ ಪದ್ಧತಿಯು ಸಾಕ್ಷಿಗಳ ಮುಖಾಂತರ ಸಂಗತಿಗಳ ಸಿದ್ಧಪಡಿಸುವಿಕೆಯ ಮೇಲೆ ಕಟ್ಟಲ್ಪಟ್ಟದ್ದೆ. ಇದಲ್ಲದೇ, ಜಾರ್ಜ್ ವಾಷಿಂಗ್ಟನ್ ಅವರ ಐತಿಹಾಸಿಕತೆಯಂತೆ, ಐತಿಹಾಸಿಕ, ದಾಖಲೆಗಳ ನಂಬಲರ್ಹತೆಯು ಸಾಕ್ಷಿಯ ಮೇಲೆ ಅವಲಂಬಿಸಿರುತ್ತದೆ.

ನಂಬಲರ್ಹ ಸಾಕ್ಷಿಯ ಖಚಿತತೆಯು ನಿಸರ್ಗದಲ್ಲಿ ದೃಢತೆಯಂತೆ ನೈಸರ್ಗಿಕ ನಿಯಮವಾಗಿದೆ. ನಿಸರ್ಗದಲ್ಲಿಯ ದೃಢತೆಯು, ಮಾನವ ಅನುಭವದಿಂದ ಸ್ಥಿರಪಡಿಸಲ್ಪಟ್ಟದ್ದು ನೈಸರ್ಗಿಕ ನಿಯಮದಂತೆ ಸ್ವೀಕರಿಸಲ್ಪಟ್ಟಿದೆ. ಅದೇ ನಿಶ್ಚಯವಾದ ರೀತಿಯಲ್ಲಿ, ನಂಬಲರ್ಹ ಸಾಕ್ಷಿಯ ಖಚಿತತೆಯು ಮಾನವ ಅನುಭವದಿಂದ ದೃಢಪಡಿಸಲ್ಪಟ್ಟು ನೈಸರ್ಗಿಕ ನಿಯಮದಂತೆ ಸ್ವೀಕರಿಸಲ್ಪಟ್ಟಿದೆ. ಅದ್ಭುತಗಳನ್ನು ತಿರಸ್ಕರಿಸಲು ಒಬ್ಬನು ಕಾರಣವಾಗಿ ನಿಸರ್ಗದಲ್ಲಿಯ ದೃಢತೆಯ ನಿಯಮವನ್ನು ಹಿಡಿದಿರುವಂತೆ ಅವನು ಮಾನವ ಸಾಕ್ಷಿಯ ನಂಬಲರ್ಹತೆಯ ನಿಯಮವನ್ನು ತಿರಸ್ಕರಿಸುತ್ತಾನೆ. ಅವನು ಒಂದು ನೈಸರ್ಗಿಕ ನಿಯಮಕ್ಕೆ ವಿರುದ್ಧವಾಗಿ ಇನ್ನೊಂದು ನೈಸರ್ಗಿಕ ನಿಯಮವನ್ನು ಎತ್ತಿ ಕಟ್ಟುತ್ತಿರುವನು. ಇನ್ನೊಂದನ್ನು ತಪ್ಪಿಸಿಕೊಳ್ಳುವದಕ್ಕೆ ಅವನು ಒಂದು ಅದ್ಭುತವನ್ನು (ನೈಸರ್ಗಿಕ ನಿಯಮದ ಅತಿಕ್ರಮಣವನ್ನು) ಸ್ವೀಕರಿಸುವ ಅಗತ್ಯತೆಯಿರುವುದು.

ಇದಲ್ಲದೇ, ತನ್ನ ಸ್ವಂತ ವೈಯಕ್ತಿಕ ಅನುಭವದ ಸಂಕುಚಿತ ಮಿತಿಯನ್ನು ಬಿಟ್ಟು, ಸೃಷ್ಟಿಯ ದೃಢತೆಯಲ್ಲಿ ಹ್ಯೂಮನ ನಂಬಿಕೆಯು ಸಾಕ್ಷಿಯಿಂದ ಬೆಂಬಲಿಸಲ್ಪಟ್ಟಿದೆ. "ಇತರ ಯುಗಗಳಲ್ಲಿಯೂ, ದೇಶಗಳಲ್ಲಿಯೂ" ಏನು ಸಂಭವಿಸಿತು ಎಂಬುದೆಲ್ಲವನ್ನು ಸಾಕ್ಷಿಯಿಂದ ಅವನು ತಿಳಿದು ಕೊಂಡನು. ಆದುದರಿಂದ, ಅವನು ಸಾಕ್ಷಿಯನ್ನು ತೆಗೆದು ಹಾಕಲು ಸಾಕ್ಷಿಯನ್ನು ಸ್ವೀಕರಿಸುವವನಾದನು. ಕೆಲವು ಸಮಯಗಳಲ್ಲಿ ಹ್ಯೂಮನು ರುಜುವಾತನ್ನು ಸ್ಥಾಪಿಸುವದರಲ್ಲಿ ಮಾನವ ಸಾಕ್ಷಿಯ ಸಾಕಷ್ಟದ್ದರ ಮೇಲೆ ಅವನ ವಿವೇಚನೆಯು ತಪ್ಪು ಭ್ರಮೆಯನ್ನು ಅರಿತುಕೊಂಡಿತು. ಇದನ್ನು ಅವನು, ಮುಂದಿನಂತೆ ಒಪ್ಪಿಕೊಂಡನು: "ಇದನ್ನು ಒಪ್ಪಿಕೊಳ್ಳುತ್ತೇನೆ ... ಅದ್ಭುತ ಕಾರ್ಯಗಳು

ಇರುವ ಸಾಧ್ಯತೆಯಿದೆ ಇಲ್ಲವೇ ಸೃಷ್ಟಿಯ ಸಾಮಾನ್ಯ ಗತಿಯ ಮೀರುವಿಕೆಯೂ ಇರುವ ಸಾಧ್ಯತೆಯಿದೆ, ಮಾನವ ಸಾಕ್ಷಿಯಿಂದ ರುಜುವಾತನ್ನು ಒಪ್ಪಿಕೊಳ್ಳುವಂಥ ರೀತಿಯೂ ಇರುತ್ತವೆ…"[2] ಸ್ವೀಕರಿಸುವದಕ್ಕೆ ತಾನು ಸಿದ್ಧನಾಗಿರುವಂಥ ಒಂದು ಉದಾಹರಣೆಯನ್ನೂ ಅವನು ಹೇಳಿದನು:

> ಹೀಗೆ, ಎಲ್ಲಾ ಕರ್ತೃಗಳು, ಎಲ್ಲಾ ಭಾಷೆಗಳಲ್ಲಿ, 1600 ಜನವರಿ ಒಂದರಿಂದ ಎಂಟು ದಿನಗಳ ವರೆಗೆ ಇಡೀ ಭೂಲೋಕದ ಮೇಲೆ ಸಂಪೂರ್ಣವಾಗಿ ಕತ್ತಲೆಯಿರುವದೆಂದು ಒಪ್ಪಿಕೊಳ್ಳುವರೆಂದು ತಿಳಿಯಿರಿ; ಈ ವಿಶಿಷ್ಟವಾದ ಘಟನೆಯ ಸಂಪ್ರಾದಾಯವು ಜನರ ಮಧ್ಯದಲ್ಲಿ ಇನ್ನೂ ಬಲವಾಗಿದ್ದು ಸಜೀವ ವಾದದ್ದಾಗಿರುವದೆಂದು ತಿಳಿಯಿರಿ; ಪರದೇಶಗಳಿಂದ ಹಿಂದಿರುಗಿ ಬರುವ ಎಲ್ಲಾ ಪ್ರಯಾಣಿಕರು ಯಾವುದೇ ಬದಲಾವಣೆಯಿಲ್ಲದೆ ಇಲ್ಲವೇ ವಿರುದ್ಧವಾದವು ಇಲ್ಲದೇ ಅದೇ ಸಾಂಪ್ರದಾಯದ ವರದಿಗಳನ್ನು ತಂದರೆ; ನಮ್ಮ ಈಗಿನ ತತ್ವಜ್ಞಾನ ಶಾಸ್ತ್ರಗಳು ಆ ಸಂಗತಿಯ ಬಗ್ಗೆ ಸಂಶಯವಿಲ್ಲದೇ ಅದನ್ನು ನಿಶ್ಚಿತವಾದದ್ದೆಂದು ಸ್ವೀಕರಿಸುವರು, …[3]

ಒಂದು ಅದ್ಭುತವನ್ನು ಸ್ಥಾಪಿಸುವದಕ್ಕೆ ಮಾನವ ಸಾಕ್ಷಿಯ ಒತ್ತಡವನ್ನು ಅವನು ಅರ್ಥಮಾಡಿಕೊಂಡನು. ಹೀಗೆ ಒಪ್ಪಿಕೊಂಡ ನಂತರ ಅವನು ಈ ಆಕ್ಷೇಪಣೆಯಿಂದ ಧರ್ಮಕ್ಕೆ ವಿರೋಧವಾಗಿ ತನ್ನ ಪೂರ್ವ ಕಲ್ಪಿತ ವಿರೋಧವನ್ನು ತೋರಿಸಿದನು:

> ಈ ಅದ್ಭುತ ಕಾರ್ಯವು ಧರ್ಮದ ಯಾವುದೇ ಹೊಸಪದ್ಧತಿಗೆ ಅನ್ವಯಿಸಲ್ಪಟ್ಟರೆ … ಬುದ್ಧಿಯುಳ್ಳ ಎಲ್ಲಾ ಜನರು ಸಂಗತಿಯನ್ನು ತಿರಸ್ಕರಿಸುವಂತೆ ಮಾಡುವದಲ್ಲದೇ, ಇನ್ನೂ ಹೆಚ್ಚಿನ ಪರೀಕ್ಷೆ ಮಾಡದೇ ತಿರಸ್ಕರಿಸುವಂತೆ ಈ ಸನ್ನಿವೇಶವು ಮೋಸದ, ಪೂರ್ಣವಾದ ರುಜುವಾತು ಆಗುವುದು.[4]

ಸಾಕ್ಷಿಯಿಂದ ಸಿದ್ಧಪಡಿಸಿ ತೋರಿಸಲ್ಪಟ್ಟ ಧಾರ್ಮಿಕವಲ್ಲದ ಅದ್ಭುತ ಕಾರ್ಯದ ಹ್ಯೂಮನ ಹೇಳಿಕೆಯಲ್ಲದೇ ಅವನು ವರದಿಯಾದ ಅದ್ಭುತ ಕಾರ್ಯವನ್ನು ಅದರ ಅಸತ್ಯತೆಯು ಹೆಚ್ಚು ಅದ್ಭುತಕರವಾದದ್ದಾಗಿದ್ದರೆ ಅದು ಸ್ವೀಕರಿಸಲ್ಪಟ್ಟಿರ ಬೇಕು ಎಂದು ಒಪ್ಪಿಕೊಂಡನು: "ಸಾಕ್ಷಿಯು ಸ್ಥಾಪಿಸಲಿಕ್ಕೆ ಪ್ರಯತ್ನಿಸಿದ ಸಂಗತಿಗಿಂತ ಸಾಕ್ಷಿಯು, ಅಸತ್ಯತೆಯು ಹೆಚ್ಚು ಅದ್ಭುತಕರವಾದದ್ದಾಗಿದ್ದರೆ, ಸಾಕ್ಷಿಯು ಅಂಥ ರೀತಿ ಯದಾಗಿರದಿದ್ದರೆ, ಅದು ಸಾಕ್ಷೀಯಾಗಲು ಸಾಕಷ್ಟಾಗಿರಲಾರದು."[5] ಎಂದು ಅವರು ಹೇಳಿದರು. ಸತ್ಯಕ್ಕಾಗಿ ಬೈಬಲ್, ಅದರ ಬರಹಗಾರರು ಹಾಗೂ ಅದರ ಪ್ರಭಾವವು ಮನುಷ್ಯರ ಪ್ರಶ್ನೆಗಳನ್ನು ಉತ್ತರಿಸದೆ ಬಿಡುವವು ಮತ್ತು ಬೈಬಲಿನಲ್ಲಿಯ ಅದ್ಭುತಗಳು ಸುಳ್ಳಾಗಿದ್ದರೆ ಉತ್ತರವಿಲ್ಲದವುಗಳಾಗುವವು ಎಂಬುದನ್ನು ಯೋಚಿಸುವಲ್ಲಿ ಹ್ಯೂಮನು ವಿಫಲನಾದನು. ಸತ್ಯವಾದ ಪ್ರತಿಯೊಂದಕ್ಕೆ ಬೈಬಲಿನ ಬಲವಾದ ಪ್ರಭಾವವು ಅದರ ಅದ್ಭುತಕಾರ್ಯಗಳು ಸತ್ಯವಾಗಿದ್ದರೆ ಅರ್ಥಕೊಡುವುದು, ಆದರೆ ಆ ಪ್ರಭಾವವು ಅದರ ಅದ್ಭುತ ಕಾರ್ಯಗಳು ಕಲ್ಪನಿಕವಾದವುಗಳಾಗಿದ್ದರೆ ವಿವರಿಸಲಾದವುಗಳಾಗುವವು.

ಕ್ರೈಸ್ತತ್ವದ ವರದಿ ಮಾಡಲ್ಪಟ್ಟ ಅದ್ಭುತ ಕಾರ್ಯಗಳು ಒಂದು ಮೂಲೆಯಲ್ಲಿ ಮಾಡಲ್ಪಟ್ಟವುಗಳಾಗಿರುವದಿಲ್ಲ; ಅವು ಬಹಿರಂಗವಾಗಿ ಮಾಡಲ್ಪಟ್ಟವು. ಅವು ಬಹಳ ಭಿನ್ನವಾದವುಗಳಾಗಿದ್ದವು; ಎಪ್ಪತ್ತು ವರ್ಷಗಳ ಅವಧಿಯೊಳಗೆ ಸಂಭವಿಸಿದವು. ಅವು ಸುಳ್ಳಾದವುಗಳೆಂದು ತಿಳಿದು ಕೊಳ್ಳುವುದು - ಹಾಗೂ ಸಾವಿರಾರು ಜನರು

ಮೋಸಗೊಳಿಸಲ್ಪಟ್ಟದ್ದು, ಅವರಲ್ಲಿ ಅನೇಕರು ವಿಶ್ವಾಸಿಗಳಾಗಿ ಮರಣ ಹೊಂದಿದರು - ಅದ್ಭುತ ಕಾರ್ಯಗಳ ನಿಜತ್ವವನ್ನು ಸ್ವೀಕರಿಸುವದಕ್ಕಿಂತ ಹೆಚ್ಚು ಕಠಿಣವಾದದ್ದಾಗುತ್ತವೆ. ಉದಾಹರಣೆಯಾಗಿ, ಸಾವಿರಾರು ಜನರು ಆಹಾರವನ್ನು ವೃದ್ಧಿಗೊಳಿಸದೆ ಅದ್ಭುತ ಕಾರ್ಯದಲ್ಲಿ ಒಳಗೊಂಡಿದ್ದರು. ಆಹಾರದ ಕೊರತೆಯನ್ನು ಅಪೊಸ್ತಲರು ನೋಡಿದರು. ಅದು ವೃದ್ಧಿಯಾಗುವದನ್ನು ಗಮನಿಸಿದರು, ಅದನ್ನು ವಿತರಿಸಿದರು ಹಾಗೂ ಅವರು ಪ್ರಾರಂಭದಲ್ಲಿಯಕ್ಕಿಂತ ಹೆಚ್ಚಾದದ್ದನ್ನು ಕೂಡಿಸಿದರು. ಇಲ್ಲವೇ ಅವರು ತಮ್ಮ ವರದಿಗಳನ್ನು ಸುಳ್ಳಾಗಿ ವರದಿ ಮಾಡಿದರು. ಮೋಸವು ಸಾಧ್ಯವಾಗಿರಲಿಲ್ಲ. ನಿಶ್ಚಯವಾಗಿಯೂ ಸಮುದ್ರದ ಬಳಿಯಲ್ಲಿ ಬಂದವರು ರೊಟ್ಟಿಗಳೂ, ಮೀನುಗಳೂ ಹೆಚ್ಚಾಗಿ ಮಾಡಲ್ಪಟ್ಟದ್ದು ಸುಳ್ಳೆಂದು ಯೋಚಿಸಲಿಲ್ಲ.

ಯೇಸುವು ಜಗತ್ತಿನ ಅತೀ ಜಾಣ ನಟನೆಂದು ಮತ್ತು ಜಗತ್ತಿನ ಅತೀ ಕ್ರೂರ ಮನುಷ್ಯನೆಂದು (ವಿಶ್ರಾಂತಿಯನ್ನೂ ರಕ್ಷಣೆಯನ್ನೂ ಕೊಡುವೆನೆಂದು ಸುಳ್ಳು ಹೇಳಿದವನು) ತಿಳಿಯುವುದು ಅದ್ಭುತಗಳ ನಿಜತ್ವವನ್ನು ಸ್ವೀಕರಿಸುವುದು ಬಹಳ ಕಠಿಣವಾದದ್ದಾಗುತ್ತದೆ. ಆತನು ಪೀಡಿಸುವಾತನೂ, ಚಿತ್ರಹಿಂಸೆ ಕೊಡುವಾತನೂ (ಜನರ ನಿರೀಕ್ಷೆಗಳನ್ನು ಮೂದಲಿಸುವಾತನು) ಆಗಿದ್ದನು ಇಲ್ಲವೇ ಆತನು ಜನರಿಂದ ಅತಿಯಾಗಿ ಮೋಸಗೊಳಿಸಲ್ಪಟ್ಟ ಮನುಷ್ಯನಾಗಿದ್ದನು ಎಂಬುದು ಯಾವುದೇ ಅದ್ಭುತ ಕಾರ್ಯಕ್ಕಿಂತ ಹೆಚ್ಚು ನಂಬಲಸಾಧ್ಯವಾದದ್ದಾಗಿದೆ.

ಅದ್ಭುತ ಕಾರ್ಯವು ಅಸಾಧ್ಯವಾಗಿದೆ ಎಂದು ಹ್ಯೂಮನ ವಿವೇಚನೆಯು ಊಹಿಸುತ್ತದೆ. ಆದುದರಿಂದ ಯಾವುದೇ ಸಾಕ್ಷಿಯು ಸಂಭವಿಸದೇ ಇರುವದನ್ನು ದೃಢಪಡಿಸುವುದು. ಹೀಗಿದ್ದರೂ ಕೇವಲ ನಾಸ್ತಿಕರು ಇಲ್ಲವೇ ಆಸ್ತಿಕರು ಮಾತ್ರವೇ ಅಂಥ ಕಲ್ಪನೆ ಮಾಡುವದರಿಂದ ಹ್ಯೂಮನ ವಿವೇಚನೆಯು ನಾಸ್ತಿಕರಿಗೆ ಇಲ್ಲವೇ ಆಸ್ತಿಕರಿಗೆ ಮಾತ್ರವೇ ಮನವೊಲಿಸುವುದಾಗಿದೆ.

ನಿಷೇದಾರ್ಥಕವಾದ, ನಿರಾಶಾವಾದ ಮನೋಭಾವನೆಯು ಹ್ಯೂಮನನ್ನು ದೀರ್ಘ ಕಾಲದ ಸಂಶಯ ಪಡುವವನನ್ನಾಗಿ ಮಾಡಿ ಅವನ ಮೇಲೆ ಜೀರಿದಂತೆ ತೋರುತ್ತದೆ. ಅಂಥ ಯೋಚನೆಯ ಅನಿವಾರ್ಯದ ಪರಿಣಾಮವು ಅವನ ನಿರಾಶೆಗಳಲ್ಲಿ, ಗಲಿಬಿಲಿಯಲ್ಲಿ ಮತ್ತು ಆಶಾರಹಿತವಾದದಲ್ಲಿ ಕಂಡು ಬರುತ್ತದೆ. ಅವನ ವಿವೇಚನೆಯು ಅವನನ್ನು "ಮೋಸಕರ ಸಿದ್ಧಾಂತ ತತ್ವಜ್ಞಾನ ಬೋಧನೆಯಿಂದ" ಕೆಡಿಸಿತು (ಕೊಲೊಸ್ಸೆ 2:8). ತಮ್ಮ ಆಶೀರ್ವಾದಗಳಿಗಾಗಿ ಕೃತಜ್ಞತೆ ಹೇಳದವರಲ್ಲಿ, ಆದರೆ "ವಿಚಾರ ಮಾಡಿ ಫಲ ಕಾಣದ ಹಾಗೂ ವಿವೇಕವಿಲ್ಲದ ಮನಸ್ಸು ಕತ್ತಲಾಯಿತು" (ರೋಮಾಪುರ 1:21) ಜನರಲ್ಲಿ ಹ್ಯೂಮನು ಒಬ್ಬನಾದನು. ಅವನು ತನ್ನನ್ನು ಮೋಸಪಡಿಸಿಕೊಂಡ ಮನುಷ್ಯನು. ತನ್ನ ಸ್ವಂತ ಕುಯುಕ್ತಿಗೆ ಬಲಿಪಶುವಾದವನು. ನಿರಾಶೆಯನ್ನು ಬಿತ್ತಿದವನು ಹಾಗೂ ಅದನ್ನು ಸುಗ್ಗಿಮಾಡಿದವನು ಆಗಿದ್ದನು.

ಅದ್ಭುತ ಕಾರ್ಯಗಳ ರುಜುವಾತಾಗಿ ಮಾನವ ಸಾಕ್ಷಿಯನ್ನು ತಿರಸ್ಕರಿಸಿದ್ದು ಅಕಾರಣವಾದದ್ದೂ ಒತ್ತಾಯಿಸಿದ್ದೂ ಆಗಿದೆ.

**"ಸೃಷ್ಟಿಯಲ್ಲಿಯ ಏಕರೂಪತೆಯ ವೈಜ್ಞಾನಿಕ ನಿಯಮವು ಅದ್ಭುತ ಕಾರ್ಯವನ್ನು ಅಸಾಧ್ಯವಾಗಿ ಮಾಡುತ್ತದೆ"**

ಅದ್ಭುತ ಕಾರ್ಯಗಳನ್ನು ವಿರೋಧಿಸಲು ಉಪಯೋಗಿಸಿದ ಎರಡನೆಯ ವಾದವು ಸೃಷ್ಟಿಯಲ್ಲಿಯ ಏಕರೂಪತೆಯ ವೈಜ್ಞಾನಿಕ ನಿಯಮವು - ಅಂದರೆ ಸೃಷ್ಟಿಯು

ಯಾವಾಗಲೂ ನಿಷ್ಪಕ್ಷಪಾತ ರೀತಿಯಲ್ಲಿ ವರ್ತಿಸುತ್ತದೆ - ಎಂಬುದು ಅದ್ಭುತ ಕಾರ್ಯಗಳಿಗೆ ಎಡೆ ಕೊಡುವದಿಲ್ಲ. ಹೆಚ್ಚಾದ ಮಾನವ ಜೀವಿಗಳಿಂದ ಅನುಭವಿಸಲ್ಪಟ್ಟ ಪ್ರತಿಯೊಂದಕ್ಕೂ ನೈಸರ್ಗಿಕ, ತಾರ್ಕಿಕ ಕಾರಣ ಇರುವದರಿಂದ ಸಹಜವಾದ, ನೈಸರ್ಗಿಕ ಕಾರಣಗಳಿಲ್ಲದೆ ಯಾವುದೇ ಉದ್ದೇಶಿತ ಅನುಭವವು ಅಸಾಧ್ಯವಾಗಿದೆ ಎಂದು ವಿವೇಚಿಸಲ್ಪಟ್ಟಿದೆ.

ಹೀಗಿದ್ದರೂ ಒಬ್ಬ ವ್ಯಕ್ತಿಯ ಅನುಭವದ ಎಲ್ಲವೂ ನೈಸರ್ಗಿಕವಾದದ್ದೂ ಹಾಗೂ ವಿವರಿಸಲ್ಪಟ್ಟ ಕಾರಣಗಳುಳ್ಳದ್ದೂ ಎಂಬುದು ವಿಶ್ವದ ಅನುಭವವು ಒಂದೇ ರೀತಿ ಯದಾಗಿರುವುದು ಎಂದರ್ಥವಾಗುವದಿಲ್ಲ. ಒಬ್ಬ ವಿಜ್ಞಾನಿಯು ಇಂದಿನ ದಿನದ ಘಟನೆಗಳು ವಿವರಿಸಲ್ಪಡಬಹುದಾದ ಕಾರಣಗಳೊಂದಿಗಿವೆ ಎಂದು ಸರಿಯಾಗಿ ಗಮನಿಸಬಹುದು. ತನ್ನ ಗಮನಿಸುವಿಕೆಯ ಮೇಲೆ ಅವಲಂಭಿಸಿ ಅವನು ಮುಂದೆ ಹೋಗಿ (ಸರಿಯಾಗಿ ಅಲ್ಲದಿದ್ದರೂ) ಯಾವ ದೈವಿಕ ಘಟನೆಗಳೂ ಎಂದೂ ಇರಲಿಲ್ಲವೆಂದು ತೀರ್ಮಾನಿ ಸಬಹುದು. ಅಂಥ ಊಹೆ ಮಾಡುವದರಲ್ಲಿ ಅವನು ತನ್ನ ಯೋಗ್ಯಸ್ಥಾನ ದಾಟಿ ಹೋಗಿ ರುತ್ತಾನೆ. ಈಗ ಏನು ಸಂಭವಿಸುತ್ತಲಿದೆ ಎಂಬುದಕ್ಕೆ ಅವನು ಸರಿಯಾಗಿ ಸಾಕ್ಷಿಕೊಡ ಬಹುದು. ಆದರೆ ಹಿಂದಿನ ಸಮಯಗಳಲ್ಲಿ ಏನು ಸಂಭವಿಸಿತು ಎಂಬುದನ್ನು ತಿಳಿಯಲು ಅವನಿಗೆ ಸಾಧನಗಳಿರಲಿಲ್ಲ. ಅವನ ತೀರ್ಪು ಅವೈಜ್ಞಾನಿಕವಾದದ್ದಾಗಿದೆ. ವೈಜ್ಞಾನಿಕ ಜ್ಞಾನಕ್ಕೆ ಮತ್ತು ಸಾಧನಕ್ಕೆ ಅಪರಿಚಿತವಾಗಿರುವ ಕ್ಷೇತ್ರಗಳಲ್ಲಿ ಅವನು ಅಕ್ರಮವಾಗಿ ಹೋಗಿದ್ದಾನೆ. ದೈಹಿಕವಾದದ್ದನ್ನು ಅವನು ತಳ್ಳಿಬಿಟ್ಟು ಆಧ್ಯಾತ್ಮಿಕವಾದದ್ದರೊಳಗೆ, ಸಿದ್ಧಪಡಿಸಿ ತೋರಿಸಲಾಗದ ಕಲ್ಪನೆಯ ಕ್ಷೇತ್ರದೊಳಗೆ ತನ್ನನ್ನು ಇಳಿಸಿಕೊಂಡಿದ್ದಾನೆ. ನಿಸರ್ಗದಲ್ಲಿಯ ಅದ್ಭುತಗಳ ಕೊರತೆಯು ಈಗ ಇತಿಹಾಸದಲ್ಲಿ ಅವುಗಳ ನಿಜತ್ವವನ್ನು ಅಲ್ಲಗಳೆಯುವದಿಲ್ಲ. ಕೇವಲ ಐತಿಹಾಸಿಕ ವಿಜ್ಞಾನವು, ನೈಸರ್ಗಿಕ ವಿಜ್ಞಾನದಲ್ಲಿ, ಈ ವಿಷಯಗಳ ಮೇಲೆ ಮಾತಾಡಬಹುದು. ವಿಜ್ಞಾನದ ಅನುಭವವು ಸ್ಥಳ ಹಾಗೂ ಸಮಯದಲ್ಲಿ ಮಿತಿಗೊಳಿಸಲ್ಪಟ್ಟಿರುದರಿಂದ, ತಾನು ಎಲ್ಲರಿಗೂ ಯಾವಾಗ ಅದು ಇರಲಿಲ್ಲ ಎಂಬುದನ್ನು ಮಾತಾಡಲು ವಿಜ್ಞಾನವನ್ನು ಒತ್ತಾಯ ಮಾಡುತ್ತದೆ.

ವಿಜ್ಞಾನಿಗಳು ನಿತ್ಯವಾದ ಅದ್ಭುತ ಕಾರ್ಯಗಳಿಲ್ಲದ ಕಟ್ಟಳೆಯನ್ನು ಹೊರಡಿಸುವಾಗ ಅವರು ಮಿತಿಮೀರಿದವರಾಗಿದ್ದುದರಿಂದ, ಏಕರೂಪದ ಅವರ ಬೋಧನೆಯು ಭೌತದ್ರವ್ಯದ ಪ್ರಾರಂಭಕ್ಕಾಗಿ, ಜೀವನದ ಪ್ರಾರಂಭಕ್ಕಾಗಿ ಮತ್ತು ಜೀವದ ಉತ್ಕ್ರಾಂತಿಯೆಂದು ಹೇಳಲ್ಪಟ್ಟದ್ದಕ್ಕಾಗಿ ಅವುಗಳನ್ನು ವಿವರವಿಲ್ಲದೇ ಬಿಟ್ಟು ಬಿಡುತ್ತದೆ. ಸೃಷ್ಟಿಯಲ್ಲಿಯ ಏಕರೂಪಗಳ ತತ್ವವು ಅದ್ಭುತ ಕಾರ್ಯಗಳನ್ನು ನಿರ್ಬಂಧಿಸುತ್ತದಾದರೆ, ಅದು ಭೌತದ್ರವ್ಯದ ಪ್ರಾರಂಭವನ್ನೂ ಜೀವದ ಪ್ರಾರಂಭವನ್ನೂ ಜೀವದ ಉತ್ಪತ್ತಿಯನ್ನೂ ಪ್ರತಿಬಿಂಬಿಸುತ್ತದೆ. ಮನುಷ್ಯಾಕಾರದ ಬಾಲವಿಲ್ಲದ ಕೋತಿಯ ಮೆದುಳಿನಿಂದ ಮಾನವ ಮೆದುಳಿಗೆ ಮಾರ್ಪಡಿಸುವುದು ನಿಶ್ಚಯವಾಗಿ ಬೈಬಲಿನ ಯಾವುದೇ ಅದ್ಭುತ ಕಾರ್ಯಕ್ಕಿಂತ ದೊಡ್ಡ ಅದ್ಭುತ ಕಾರ್ಯವಾಗಿರುವುದು.

ಸಾಕ್ಷಿಯ ಸಾಕಾಗದಿರುವಿಕೆಯ ಮೇಲೆ ಅವಲಂಭಿಸಿದ ವಾದವು ಮನವೊಲಿಸ ದಂಥದ್ದಾಗಿ ಇರುವಂತೆ ನಿಸರ್ಗದ ಇಂದಿನ ಏಕರೂಪತೆಯು ಯಾವುದೇ ಹಿಂದಿನ ಅದ್ಭುತ ಕಾರ್ಯವನ್ನು ಒಳಗೊಂಡಿರುವದಿಲ್ಲ ಎಂಬ ವಾದವು ಕೊರತೆಯುಳ್ಳದ್ದಾಗಿದೆ.

**"ವಿಗ್ರಹಾರಧಕರಿಂದ ಮತ್ತು ಇತರರಿಂದ ಅದ್ಭುತ ಕಾರ್ಯಗಳ ಬಗ್ಗೆ ಮಾಡಿದ ಹೇಳಿಕೆಗಳು ಬೈಬಲಿನ ಹೇಳಿಕೆಗಳಿಗೆ ನ್ಯಾಯ ಸಮ್ಮತವಾಗಿವೆ"**

ಬೈಬಲಿನ ಅದ್ಭುತ ಕಾರ್ಯಗಳ ನಿಜತ್ವವನ್ನು ತೆಗೆದು ಹಾಕಲು ಮೂರನೆಯ ಪ್ರಮುಖ ವಾದವು ವಿಗ್ರಹಾರಧಕರ ಮತ್ತು ಇತರ ಧರ್ಮದ ಅನುಯಾಯಿಗಳ ಅದ್ಭುತ ಕಾರ್ಯಗಳೊಂದಿಗೆ ಗುಂಪು ಮಾಡುವದರಿಂದ ಕಳಂಕ ಹಚ್ಚುವದಾಗಿದೆ. ಹೀಗಿದ್ದರೂ, ಖೋಟಾ ನಾಣ್ಯಗಳು ನಿಜವಾದ ನಾಣ್ಯಗಳನ್ನು ಗುರುತಿಸಲು ಸಹಾಯ ಮಾಡುವಂತೆ, ನಕಲಿ ಅದ್ಭುತ ಕಾರ್ಯಗಳನ್ನು ನಿಜವಾದ ಅದ್ಭುತಕಾರ್ಯಗಳ ಲಕ್ಷಣಗಳನ್ನು ಹೋಲಿಸುವಾಗ ಭಿನ್ನತೆಗಳನ್ನು ಗಮನಿಸುವದರಿಂದ ನಿಜವಾದ ಅದ್ಭುತಕಾರ್ಯಗಳ ಮತ್ತು ಮೋಸಕರವಾದವುಗಳ ಮಧ್ಯದಲ್ಲಿ ಭಿನ್ನತೆಯನ್ನು ಬೇಗನೇ ಕಂಡು ಹಿಡಿಯ ಬಹುದು.

ಅದ್ಭುತ ಕಾರ್ಯಗಳು, ಮೊದಲನೆಯ ಶತಮಾನದ ಮಾಂತ್ರಿಕನಾದ ಅಪೊಲ್ಲೊನಿಯಸನೊಂದಿಗೆ ಸಂಬಂಧಿಸಲ್ಪಟ್ಟಿವೆ. ಆದರೆ ವಿಶ್ವಾಸಾರ್ಹತೆಯನ್ನು ಒಬ್ಬನು ಪರೀಕ್ಷಿಸುವಾಗ, ಅದರಲ್ಲಿ ಕೊರತೆ ಕಂಡುಬರುತ್ತದೆ. ಅಸ್ತಿತ್ವದಲ್ಲಿರುವ ಕೇವಲ ಪುರಾವೆಯು ಮೊದಲನೆಯ ಶತಮಾನದಿಂದಲ್ಲ, ಆದರೆ ಮೂರನೆಯ ಶತಮಾನದಿಂದ ಬರುತ್ತದೆ ಮತ್ತು ಪ್ರತ್ಯಕ್ಷ ದರ್ಶಿಗಳಿಂದಲ್ಲ ಆದರೆ ಬೇರೆಯವರ ವರದಿಯಿಂದ ಬರುತ್ತದೆ.

ಯೇಸುವನ್ನು ಕಡೆಗಣಿಸಲು ಅಪೊಲ್ಲೊನಿಯಸ್‌ನ ಬಗ್ಗೆ ದಂತ ಕಥೆಗಳನ್ನು ಉಪಯೋಗಿಸುವದಕ್ಕೆ ಅಲ್ಪ ಕಾರಣವಿದ್ದರೂ ಟೀಕಾಕಾರರು ಅವುಗಳನ್ನು ಉಪಯೋಗಿಸಬಹುದಿತ್ತು. ಡೇವಿಡ್ ಹ್ಯೂಮನು ಅದ್ಭುತಕಾರ್ಯಗಳ ಒಪ್ಪಿಕೊಳ್ಳದ ಮೂರು ವರದಿಗಳನ್ನು ಉಪಯೋಗಿಸಿದನು. ಆದರೆ ಈ ವರದಿಗಳನ್ನು ಅವನ ಜೀವನದೊಂದಿಗೆ ಯಾರೂ ಪರೀಕ್ಷಿಸಲಿಲ್ಲ. ಯೇಸುವಿನ ಕಾರ್ಯಗಳ ಮತ್ತು ಬೋಧನೆಗಳ ಸತ್ಯತೆಯ ಪ್ರತಿಪಾದನೆಯಲ್ಲಿ, ಪ್ರತ್ಯಕ್ಷ ದರ್ಶಿಗಳು ತಮ್ಮ ಜೀವನಗಳಿಂದ ಸಾಕ್ಷಿಕೊಟ್ಟರು.

ಅದ್ಭುತಗಳೆಂದು ಹೇಳಲ್ಪಟ್ಟ ಇತರ ಅದ್ಭುತಗಳು ಇಗ್ನೇಷಿಯಸ್ ಲೊಯೊಲಾ ಮತ್ತು ಫ್ರಾನ್ಸಿಸ್ ಕ್ಸೇವಿಯರ್ ಹೆಸರಿಗೆ ಸಂಬಂಧಿಸಲ್ಪಟ್ಟಿರುತ್ತವೆ. ಆದರೆ ಅವು ಆ ಜನರಿಂದ ಮೈಲುಗಳ ದೂರದಲ್ಲಿ ಮತ್ತು ಉದ್ಭವಿಸಿದ ವರ್ಷಗಳಿಗಿಂತ ದೂರದ ವರದಿಗಳ ಸಂಬಂಧದಲ್ಲಿವೆ. ಯೇಸುವಿಗೆ ಸಂಭವಿಸಿದ ಅದ್ಭುತ ಕಾರ್ಯಗಳು ಯೇಸುವು ಜೀವಿಸಿದ ಅದೇ ತಲೆಮಾರಿನಲ್ಲಿ ಹಾಗೂ ಆತನು ಸಾಧಿಸಿದ ಅದ್ಭುತಗಳನ್ನು ನೋಡಿದ ಜನರಿಂದ ಮೂಲವಾಗಿರುವ ವರದಿಗಳ ಪುರಾವೆ ಹೊಂದಿವೆ.

ಬೈಬಲಿನವುಗಳಲ್ಲದ ಅದ್ಭುತ ಕಾರ್ಯಗಳ ಘೋಷಣೆಗಳ ಪ್ರಮಾಣೀಕರಣವು ಕೊರತೆಯುಳ್ಳದ್ದಾಗಿರುವದಷ್ಟೇ ಅಲ್ಲ, ಅದ್ಭುತಗಳೆಂದು ಹೇಳಲ್ಪಡುವವುಗಳೂ ಬೈಬಲಿನಲ್ಲಿಯವುಗಳಿಗಿಂತ ಭಿನ್ನವಾದ ಭಾವವಾದವುಗಳಾಗಿರುತ್ತವೆ. ಯೇಸುವಿನ ಅದ್ಭುತಗಳು ಪ್ರಾಥಮಿಕವಾಗಿ ಆತನ ಅಧಿಕೃತತೆಗಾಗಿರುವಾಗ, ಅವು ಉಪಯುಕ್ತವಾದವುಗಳೂ ಪರೋಪಕಾರಿಯಾದವುಗಳೂ ಆಗಿದ್ದವು. ಯೇಸುವು ಹಸಿದವರಿಗಾಗಿ ಊಟಬಡಿಸಿದನು, ಅಂಗವಿಕಲರನ್ನು ಸ್ವಸ್ಥಪಡಿಸಿದನು ಮತ್ತು ವಿಯೋಗ ದುಃಖದಲ್ಲಿರುವವರಿಗೆ ಆದರಣೆ ಕೊಟ್ಟನು. ಬೈಬಲಿನವುಗಳಲ್ಲದ ಅದ್ಭುತ ಕಾರ್ಯಗಳ ಘೋಷಣೆಗಳಲ್ಲಿ ಬಹಳವಾದ ವಿರೋಧವು ಸೀಮೋನ ಮಾಗಸಿನಿಗೆ ಸಂಬಂಧಿಸಿದ ಕಲ್ಲಿನ ನಾಯಿಗಳು ಬೊಗಳುವಂತೆ ಮಾಡುವಂಥ ಹಾಗೂ ಮೂರ್ತಿಗಳು ಮಾತಾಡುವಂಥವುಗಳಿಗೆ ಸಂಬಂಧಿಸಿದ ತಂತ್ರಗಳಾಗಿವೆ. ಮಾಗಸ್‌ನು ತನ್ನನ್ನು ಹೋತವನ್ನಾಗಿ ಮಾರ್ಪಡಿಸಿಕೊಂಡನೆಂದೂ ಉರಿಯುವ ಕಲ್ಲಿದ್ದಲುಗಳ ಮೇಲೆ ಉರುಳಾಡಿದನೆಂದೂ ಹೇಳಲಾಗುತ್ತಿದೆ.

ಬೈಬಲಿನವಲ್ಲದ ಅದ್ಭುತ ಕಾರ್ಯಗಳೆಂದು ಹೇಳಲ್ಪಟ್ಟಿರುವ ಅದ್ಭುತಕಾರ್ಯಗಳಲ್ಲಿ

ಕಡಿಮೆ ತರಗತಿಯ ಆತ್ಮವಿದ್ದದ್ದು ಅಷ್ಟೇ ಅಲ್ಲ, ನೇರವಾದ ಉದ್ದೇಶವೂ ಭಿನ್ನವಾಗಿತ್ತು. ಬೈಬಲಿನ ಅದ್ಭುತ ಕಾರ್ಯಗಳ ಪ್ರಾಥಮಿಕ ಉದ್ದೇಶವು ಪ್ರಮಾಣೀಕರಿಸುವದಕ್ಕಾಗಿದ್ದರೂ ಬೈಬಲಿನವುಗಳಲ್ಲದ ಅದ್ಭುತ ಕಾರ್ಯಗಳು ತಮ್ಮ ಧರ್ಮವನ್ನು ಆಗಲೇ ಸ್ವೀಕರಿಸಿದವರಲ್ಲಿ ಘೋಷಿಸಲ್ಪಟ್ಟಿದ್ದವು. ಅದ್ಭುತ ಕಾರ್ಯಗಳೆಂದು ತಿಳಿಯಲ್ಪಟ್ಟವುಗಳು ಅವರ ಧರ್ಮದ ಅನುಬಂಧಗಳಾಗಿದ್ದವು, ಆದರೆ ರುಜುವಾತುಗಳಾಗಿರುವದಿಲ್ಲ.

ಬೈಬಲಿನ ಅದ್ಭುತ ಕಾರ್ಯಗಳ ನಿಜತ್ವಕ್ಕೆ ಪ್ರಮುಖ ಆಕ್ಷೇಪಣೆಗಳು ಭಾರವಿಲ್ಲದವುಗಳೂ ಮನದಟ್ಟು ಮಾಡಿಕೊಡದಂಥವುಗಳೂ ಆಗಿರುತ್ತವೆ.

## ಬೈಬಲಿನ ಅದ್ಭುತ ಕಾರ್ಯಗಳನ್ನು ಸ್ವೀಕರಿಸಲು ತಳಹದಿ

ಬೈಬಲಿನ ಅದ್ಭುತ ಕಾರ್ಯಗಳನ್ನು ಯಥಾರ್ಥತೆಯ ಹಕ್ಕುಸಾಧನೆಗಳನ್ನು ಕನಿಷ್ಠ ಪಕ್ಷ ನಾಲ್ಕು ಪ್ರಮುಖ ಸತ್ಯಗಳು ಬೆಂಬಲಿಸುತ್ತವೆ: (1) ಅದ್ಭುತಗಳನ್ನು ಹೇಳುವ ಪುಸ್ತಕವು ಸಂಪೂರ್ಣವಾಗಿ ನಂಬಲರ್ಹವಾಗಿದೆ, (2) ಬೈಬಲಿನ ಅದ್ಭುತಗಳಿಗೆ ಸುಳ್ಳಿನ ಗುರುತುಗಳಿರುವದಿಲ್ಲ, (3) ಯೇಸುವಿನ ಸಮಕಾಲೀನ ವೈರಿಗಳು ಮತ್ತು ಅನಂತರದ ಧರ್ಮನಿಂದಕರು ಆತನ ಅದ್ಭುತಗಳ ಬಗ್ಗೆ ಸಂಶಯಪಡಲಿಲ್ಲ, ಹಾಗೂ (4) ಯೇಸುವಿನ ಜೀವನವನ್ನು ವಿವರಿಸುವದಕ್ಕೆ ಅದ್ಭುತಗಳು ಅಗತ್ಯವಾಗಿವೆ.

### ಅದ್ಭುತಗಳನ್ನು ಹೇಳುವ ಪುಸ್ತಕದ ನಂಬಲರ್ಹತೆ

ಪುರಾವೆಯ ಅನೇಕ ವಿಧಾನಗಳು (ಇತಿಹಾಸ, ಪುರಾತನ ಶಾಸ್ತ್ರ, ಆಕಸ್ಮಿಕ ಸೂಚನೆಗಳು, ಲೇಖಕನ ಲಕ್ಷಣ ಹಾಗೂ ಬರಹಗಳ ಪರಿಣಾಮಗಳು) ಬೈಬಲು ಜಗತ್ತಿನ ಅತಿಯಾದ ವಿಶ್ವಾಸಾರ್ಹತೆಯುಳ್ಳ ಪುಸ್ತಕವಾಗಿದೆಯೆಂದು ಜಾಗತಿಕವಾಗಿ ಸ್ವೀಕರಿಸಲ್ಪಟ್ಟ ತೀರ್ಪನ್ನು ಕೊಡುವಲ್ಲಿ ಒಮ್ಮುಖವಾಗಿದೆ. ಬೈಬಲು ಅಪನಂಬಿಕೆಯ ಉತ್ಪಾದನೆಯಾಗಿದ್ದರೆ, ಆಗ ಒಳ್ಳೇ ಅರ್ಥವು ಅದರ ಅಲೌಕಿಕ ಘಟನೆಗಳ ಕಥೆಯನ್ನು ತಿರಸ್ಕರಿಸಲು ಕರೆಯುತ್ತದೆ. ಇದಕ್ಕೆ ವಿರುದ್ಧವಾಗಿ, ಬೈಬಲು ನಿರ್ವಿವಾದವಾಗಿ ಎಂದಾದರೂ ಬರೆಯಲ್ಪಟ್ಟ, ಅತಿಯಾಗಿ ಅವಲಂಭನೆಗೆ ಯೋಗ್ಯವಾದ ಪುಸ್ತಕವಾಗಿದ್ದರೆ, ಆಗ ಒಳ್ಳೇ ಅರ್ಥವು ಅದರ ಅದ್ಭುತ ಕಾರ್ಯಗಳ ಕಥೆಗಳನ್ನು ಸ್ವೀಕರಿಸಲು ಕರೆಯುತ್ತದೆ. ಬೈಬಲಿನ ನಂಬಲರ್ಹತೆಯು ತಿರಸ್ಕರಿಸಿ ಬಿಡಲಾಗದಿದ್ದರೆ, ಆಗ ತಾರ್ಕಿಕವಾಗಿ ಅದರ ಅದ್ಭುತ ಕಾರ್ಯಗಳು ತಿರಸ್ಕರಿಸಲ್ಪಡಲಾಗುವದಿಲ್ಲ. ಆದುದರಿಂದ ಬೈಬಲಿನ ನಂಬಲರ್ಹತೆಯೇ ಅದು ಹೇಳಿದ ಅದ್ಭುತ ಕಾರ್ಯಗಳ ವಾಸ್ತವಿಕತೆಯೇ ಬಲವಾದ ರುಜುವಾತಾಗುತ್ತದೆ.

### ಬೈಬಲಿನ ಅದ್ಭುತ ಕಾರ್ಯಗಳಿಗೆ ಸುಳ್ಳಿನ ಗುರುತೇ ಇರುವದಿಲ್ಲ

ಬೈಬಲಿನ ಚಾರಿತ್ರಿಕತೆಯನ್ನು ಸ್ವೀಕರಿಸುವದಕ್ಕೆ ಎರಡನೆಯ ಬಲವಾದ ಕಾರಣವು ಸುಳ್ಳಿನ ಯಾವುದೇ ಗುರುತುಗಳು ಇಲ್ಲದಿರುವುದು. ಮೋಸಗಾರನು ಸಾಧ್ಯವಾದಷ್ಟು ಪ್ರಸಿದ್ಧಿಯನ್ನು ಹೊಂದಿಕೊಳ್ಳಲು ಕಾರ್ಯಮಾಡುತ್ತಾನೆ. ಆದರೆ ಕೆಲ ಸಮಯಗಳಲ್ಲಿ ತನ್ನ ಕಾರ್ಯಗಳನ್ನು ಪ್ರಸಿದ್ಧಿ ಮಾಡುವದನ್ನು ಯೇಸು ವಿಚಿತ್ರವಾಗಿ ಪ್ರತಿಬಂಧಿಸಿದನು. ತನ್ನ ದೈವತ್ವವನ್ನು ನೋಡದಂಥವರಾದ, ಆದರೆ ಅದ್ಭುತ ಕಾರ್ಯಗಳನ್ನು ಮಾಡುವದನ್ನು ಮಾತ್ರ ನೋಡುವ, ವಿಚಾರಿಸದ ಜನ ಜಂಗುಳಿಯಿಂದ ತಪ್ಪಿಸಿಕೊಳ್ಳಲು ಆತನು ಇದನ್ನು

ಮಾಡಿದನು. ಪ್ರಸಿದ್ಧಿಯನ್ನು ನಿರ್ಬಂಧಿಸುವದಕ್ಕಾಗಿ ಕಾರಣವು ಆತನಿಗೆ ಯಾವುದೇ ಇದ್ದರೂ ಮೋಸಗಾರನು ಇಂಥದ್ದನ್ನು ಮಾಡುತ್ತಿರಲೇ ಇಲ್ಲ.

ಇದಕ್ಕಿಂತ ಹೆಚ್ಚಾಗಿ, ಮೋಸಗಾರನು ತನ್ನ ವಿಷಯದಲ್ಲಿ ಅದ್ಭುತ ಕಾರ್ಯಗಳ ಮೌಲ್ಯವನ್ನು ಹೆಚ್ಚಿಸಲು ತನ್ನ ಬಲದಲ್ಲಿ ಪ್ರತಿಯೊಂದನ್ನು ಮಾಡುವನು. ದೀನನಾದ ನಜರೇತಿನ ಬಡಿಗನು, ಸಂಬಂಧಿಸಿದ ಮೌಲ್ಯಗಳ ಸಂಪೂರ್ಣ ತಿಳುವಳಿಕೆಯೊಂದಿಗೆ ಅದ್ಭುತ ಕಾರ್ಯಗಳ ಮೌಲ್ಯವನ್ನು ಕಡಿಮೆ ಮಾಡಿದನು. ಆತನ ದೈವತ್ವದ ಬಗ್ಗೆ ನಂಬಬಾರದೆಂದು ತೀರ್ಮಾನಿಸಿಕೊಂಡವರಿಗೆ, ಅದ್ಭುತ ಕಾರ್ಯಗಳು ವ್ಯರ್ಥವಾದ ಪ್ರಯತ್ನಗಳಾಗಿವೆ. ಅದ್ಭುತಗಳು ತಮ್ಮಲ್ಲಿಯೇ ಅಂತ್ಯವಾಗುವಂತೆ ಆತನು ಬಿಡಲಿಲ್ಲ. ಯಾವುದೇ ಮೋಸಗಾರನು ಅದ್ಭುತಗಳನ್ನು ಮಾಡುವದಕ್ಕೆ ತನ್ನ ಸಾಮರ್ಥ್ಯವನ್ನು ಎಂದೂ ಹಾಗೆ ಮಿತಿಗೊಳಿಸುವದಿಲ್ಲ.

ಸ್ನಾನಿಕನಾದ ಯೋಹಾನನ ಲೆಕ್ಕದಲ್ಲಿ ಯಾವುದೇ ಅದ್ಭುತ ಕಾರ್ಯವಿಲ್ಲದ ಸಂಗತಿಯು ಸುವಾರ್ತೆಯ ಬರಹಗಾರರು ಕಲ್ಪನೆಯ ವಿವರಗಳನ್ನು ಕೊಡುವದರಲ್ಲಿ ಆಸಕ್ತರಾಗಿರಲಿಲ್ಲ ವೆಂಬುದನ್ನು ತೋರಿಸುತ್ತದೆ. ಅದಲ್ಲದೇ, ಯೇಸುವಿನ ಬಹಿರಂಗ ಸೇವೆಗಿಂತ ಮೊದಲು ಯಾವುದೇ ಅದ್ಭುತಗಳನ್ನು ಆತನಿಗೆ ಸಂಬಂಧಿಸದೇ ಇರುವುದು, ಅವರು ಚರಿತ್ರೆಯನ್ನು ಬರೆಯುತ್ತಿದ್ದರು, ಆದರೆ, ಕಥೆಗಳನ್ನು ಸಂಶೋಧಿಸುತ್ತಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಸತ್ತವರನ್ನು ಎಬ್ಬಿಸಿದ ಬಹಳ ಕೆಲವೇ ಉದಾಹರಣೆಗಳು ದಾಖಲೆ ಮಾಡಲ್ಪಟ್ಟದ್ದು ಬರಹಗಾರರು ಕೇವಲ ಆಸಕ್ತಿಯುಳ್ಳವರಾಗಿರಲಿಲ್ಲ ಎಂಬುದನ್ನು ತೋರಿಸುತ್ತದೆ: ಅರಸ ಹೆರೋದನ ಮುಂದೆ ಪ್ರದರ್ಶಿಸಲು ಯೇಸುವಿನ ತಿರಸ್ಕಾರವು ಮಂತ್ರವಾದಿಯ ಸಿಮೋನನು ಮಾಡಬಹುದಾದ್ದು ಸಂಪೂರ್ಣವಾಗಿ ವಿರುದ್ಧವಾದದ್ದಾಗಿದೆ.

ಸುವಾರ್ತೆಗಳಿಗೆ ಸುಳ್ಳಿನ ಗುರುತಿರುವದರ ಬದಲು ಅದಕ್ಕೆ ವಿರುದ್ಧವಾದದ್ದು ಸತ್ಯವಾಗಿದೆ. ಫ್ರೆಂಚ ವಿಚಾರವಾದಿ ಜೋಸೆಫ್ ರೆನಾನ್‌ನು ಸುವಾರ್ತೆಗಳು ಅಧಿಕೃತತೆಯ ಎಲ್ಲಾ ಆಂತರಿಕ ಗುರುತುಗಳನ್ನು ಒಳಗೊಂಡಿವೆ ಮತ್ತು ಬಾಹ್ಯ ಸಾಕ್ಷಿಯು ಮುಖ್ಯ ಘಟನೆಗಳನ್ನು ದೃಢಪಡಿಸುತ್ತವೆ ಎಂದು ಹೇಳಿದ್ದಾನೆ.

**ಯೇಸುವಿನ ವೈರಿಗಳು ಆತನ ಅದ್ಭುತ ಕಾರ್ಯಗಳ ಬಗ್ಗೆ ಸಂಶಯ ಪಡಲಿಲ್ಲ**

ಸುವಾರ್ತೆಯ ಅದ್ಭುತ ಕಾರ್ಯಗಳ ಸಾಧ್ಯತೆಯ ಬಗ್ಗೆ ಮೂರನೆಯ ಬಲವಾದ ರುಜುವಾತು ಯೇಸುವಿನ ಸಮಕಾಲಿನ ವೈರಿಗಳು ಮತ್ತು ಅನಂತರದ ಧರ್ಮನಿಂದಕರು ಆತನ ಅದ್ಭುತ ಕಾರ್ಯಗಳನ್ನು ಅಲ್ಲಗಳೆಯದೇ ಇದ್ದದ್ದು. ಅವರಲ್ಲಿ ಅನೇಕರು ಯೇಸುವಿನ ದೈವತ್ವದಲ್ಲಿ ನಂಬಿಕೆಯಿಲ್ಲದವರು. ಆದರೆ ಆತನ ಅದ್ಭುತಗಳನ್ನು ಪ್ರಶ್ನಿಸಿದ ಯಾರೊಬ್ಬರ ಯಾವ ದಾಖಲೆಯೂ ದೊರೆಯುವದಿಲ್ಲ.

ಯೇಸುವು ಲಾಜರನನ್ನು ಸಮಾಧಿಯೊಳಗಿಂದ ಎಬ್ಬಿಸಿದ ಹಾಗೂ ಇತರ ಅದ್ಭುತಗಳನ್ನು ಮಾಡಿದ್ದರ ವಾಸ್ತವಿಕತೆಯನ್ನು ಫರಿಸಾಯರು ಒಪ್ಪಿಕೊಂಡಿದ್ದರು. “ನಾವು ಮಾಡುವುದು ಇದೇನು? ಈ ಮನುಷ್ಯನು ಬಹು ಸೂಚಕ ಕಾರ್ಯಗಳ್ನು.ಮಾಡುತ್ತಾನಲ್ಲಾ; ನಾವು ಅವನನ್ನು ಹೀಗೆಯೇ ಬಿಟ್ಟರೇ ಎಲ್ಲರೂ ಅವನನ್ನು ನಂಬುವರು; ಮತ್ತು ರೋಮ್ ರಾಜ್ಯದವರು ಬಂದು ನಮ್ಮ ಸ್ಥಾನವನ್ನೂ ಜನವನ್ನೂ, ಸೆಳೆದು ಕೊಂಡಾರು” ಎಂದು ಹೇಳಿದರು (ಯೋಹಾನ 11:47, 48). ಅವರಲ್ಲಿ ಸಂಶಯವಿದ್ದರೆ, ಅವರು ಲಾಜರನ ವಾಸ ಸ್ಥಳಕ್ಕೆ ಒಂದು ಇಲ್ಲವೇ ಎರಡು ಮೈಲು ಮಾತ್ರ ಪ್ರಯಾಣಿಸಬೇಕಾಗಿತ್ತು. ಲಾಜರನು ಎಬ್ಬಿಸಲ್ಪಟ್ಟದ್ದನ್ನು ಅವರು ಅಲ್ಲಗಳೆಯುವದರ ಬದಲು, ಲಾಜರನನ್ನು ಕೊಲ್ಲುವ ವಿಚಾರ ಮಾಡಿ ಪುರಾವೆಯನ್ನು ನಾಶಮಾಡಲು ಹುಡುಕಿದರು.

ಅರಸ ಹೆರೋದ ಅಂತಿಪನು ಯೇಸುವಿನಲ್ಲಿ ಅದ್ಭುತಕರವಾದ ಶಕ್ತಿಗಳು ಕಾರ್ಯ ಮಾಡಿದವೆಂದು ನಂಬಿದ್ದು ಮಾತ್ರವಲ್ಲದೇ (ಮತ್ತಾಯ 14:2), ವೈಯಕ್ತಿಕವಾಗಿ ಅವುಗಳನ್ನು ನೋಡಲು ಬಯಸಿದನು (ಲೂಕ 23:8). ಇಸ್ಕರಿಯೋತ ಯೂದನು ಯೇಸುವು ಮೋಸಗಾರನಲ್ಲವೆಂದು ಸಾಕ್ಷಿ ಕೊಟ್ಟನು (ಮತ್ತಾಯ 27:3, 4). ಯೇಸುವು ನ್ಯಾಯ ವಿಚಾರಣೆಯಲ್ಲಿದ್ದಾಗ, ಅವನ ವಿರುದ್ಧವಾಗಿ ವಾದಿಸುತ್ತಿದ್ದವರು ಯಾವುದೇ ರೀತಿಯಲ್ಲಿ ಅಪರಾಧಿಯೆಂದು ತೀರ್ಪುಪಡೆಯಲಿಕ್ಕೆ ನೋಡಿದರು. ಅನೇಕ ಸುಳ್ಳು ಸಾಕ್ಷಿಗಳನ್ನು ತಂದರು (ಮತ್ತಾಯ 26:60; ಮಾರ್ಕ 14:55, 56), ಆದರೆ ಯೇಸುವಿನ ಅದ್ಭುತ ಕಾರ್ಯಗಳು ನಿಜವಾದವುಗಳಲ್ಲ ಎಂದು ಆಣೆಯಿಟ್ಟು ಹೇಳಲು ಅವರು ಯಾರನ್ನೂ ಕಂಡುಕೊಳ್ಳಲಿಲ್ಲ.

ಪಂಚಾಶತ್ತಮ ದಿನದಂದು ಪೇತ್ರನು ಯೇಸುವಿನ ಬಗ್ಗೆ ಸಾವಿರಾರು ಜನರ ಮುಂದೆ ಮಾತನಾಡಿದನು. ಅವರಲ್ಲಿ ಅನೇಕರು ಯೇಸುವನ್ನು ಶಿಲುಬೆಗೆ ಹಾಕಿದವರಿದ್ದರು. ಯಾವ ವಿವಾದವಿಲ್ಲದೇ, ಯೇಸುವು, “ನಿಮಗೂ ತಿಳಿದಿರುವಂತೆ ... ಮಹತ್ತುವಗಳನ್ನೂ ಅದ್ಭುತಗಳನ್ನೂ ಸೂಚಕ ಕಾರ್ಯಗಳನ್ನೂ ...” ಮಾಡಿದವನೆಂದು ಅವನು ಘೋಷಿಸಿದನು (ಅಪೊಸ್ತಲರ ಕೃತ್ಯ 2:22). ಸಹಾಯ ಹೀನನಾದ ಹುಟ್ಟು ಕುಂಟನನ್ನು ಗುಣಪಡಿಸಿದ್ದನ್ನು ಕುರಿತು ಕ್ರೈಸ್ತತ್ವವನ್ನು ದ್ವೇಷಿಸುವವರು, “ಪ್ರಸಿದ್ಧನಾದ ಒಂದು ಸೂಚಕ ಕಾರ್ಯವು” ನಡೆಯಿತು ಎಂದು ಒಪ್ಪಿಸಿಕೊಂಡ ... “ಅದು ಆಗಲಿಲ್ಲ ಎನ್ನುವದಕ್ಕಾಗದು” ಎಂದು ಹೇಳಿದನು (ಅಪೊಸ್ತಲರ ಕೃತ್ಯ 4:16). ಮಂತ್ರವಾದಿ ಸೀಮೋನನು, ಸುಳ್ಳನ್ನು ತಿಳಿದ ಮನುಷ್ಯನು, ಫಿಲಿಪ್ಪನು “ಸೂಚಕ ಕಾರ್ಯಗಳನ್ನೂ ಮಹತ್ಕಾರ್ಯಗಳ್ನೂ ಮಾಡಿದನೆಂದು” (ಅಪೊಸ್ತಲರ ಕೃತ್ಯ 8:13) ದೃಢಪಟ್ಟು ಕೊಂಡಿದ್ದನು ಮತ್ತು ಬೆರಗಾದನು.

ಯೇಸುವಿನ ಸಮಕಾಲಿನ ವೈರಿಗಳು ಆತನ ಅದ್ಭುತ ಕಾರ್ಯಗಳ ವಾಸ್ತವಿಕತೆಯನ್ನು ಸ್ವೀಕರಿಸಿದ್ದು ಅಲ್ಲದೇ, ಅನಂತರದಲ್ಲಿ ಅವಿಶ್ವಾಸಿಗಳೂ ಹಾಗೇ ಮಾಡಿದರು. ಯೆಹೂದಿ ರಬ್ಬಿಗಳು ತಾಲ್ಮಡ್‌ನಲ್ಲಿ ಬರೆಯುವಾಗ, ಯೇಸುವಿನ ಅದ್ಭುತಗಳು ನಿಜವಾದವುಗಳು ಎಂದು, ಅವುಗಳನ್ನು ಮಂತ್ರವಿದ್ಯೆ ಇಲ್ಲವೇ “ಯೆಹೋವನ ಪೂಜ್ಯ ಹೆಸರಿನ ಶಕ್ತಿಗೆ” ಅನ್ವಯಿಸಿ ಒಪ್ಪಿಕೊಂಡರು.

ಅನ್ಯ ಜನಾಂಗಗಳ ಅವಿಶ್ವಾಸಿಗಳು ಸಹ, ಕ್ರೈಸ್ತತ್ವದಲ್ಲಿ ತಪ್ಪುಗಳನ್ನು ಹುಡುಕುವವರಾಗಿದ್ದರೂ, ಸುವಾರ್ತೆಯ ಅದ್ಭುತಗಳ ನಿಜತ್ವದ ಮೇಲೆ ದಾಳಿ ಮಾಡಲಿಲ್ಲ. ಎರಡನೆಯ ಶತಮಾನದಲ್ಲಿ, ಸೆಲ್ಸನ್ ಎಂಬವನು ಯೇಸುವಿನ ಧರ್ಮಕ್ಕೆ ವಿರುದ್ಧವಾಗಿ ಬರೆದನು. ಆದರೆ ಒಂದು ಸಲವಾದರೂ ಎಂದೂ ಅದ್ಭುತ ಕಾರ್ಯಗಳನ್ನು ಪ್ರಶ್ನಿಸಲಿಲ್ಲ. ಅವುಗಳನ್ನು ಅವನು ಮಂತ್ರವಿದ್ಯೆಗೆ ಅನ್ವಯಿಸಿದನು. ಅದನ್ನು ಕ್ರಿಸ್ತನು ಐಗುಪ್ತದಲ್ಲಿ ಕಲಿತು ಕೊಂಡನೆಂದು ಹೇಳಿದನು. ಸುಮಾರು 270ನೇ ವರ್ಷದಲ್ಲಿ, ಪೊರ್ಫಿರಿ, ಎಂಬ ಭಯಂಕರವಾದ ವಿರೋಧಿಯು ಕ್ರೈಸ್ತತ್ವವನ್ನು ನಾಶಮಾಡಲು ಪ್ರಯತ್ನಿಸಿದನು. ಅವನ ಬರಹಗಳು ಹೊಸ ಒಡಂಬಡಿಕೆಯೊಂದಿಗಿನ ಪರಿಚಯವನ್ನು ತೋರಿಸುತ್ತವೆ. ಆದರೆ ಒಂದು ಸಲವಾದರೂ ಅವನು ಅದ್ಭುತ ಕಾರ್ಯಗಳನ್ನು ಅಲ್ಲಗಳೆದಿರುವದಿಲ್ಲ. 303ರಲ್ಲಿ, ಹಿರೊಕ್ಲೇಸ ಎಂಬ ಬಿಥೂನಿಯದ ರಾಜಪಾಲನು ಹೊಸ ಒಡಂಬಡಿಕೆಯಲ್ಲಿ ಆಂತರಿಕ ತಪ್ಪುಗಳನ್ನೂ ವಿರೋಧದ ಸಂಗತಿಗಳನ್ನೂ ಹುಡುಕಿದನು. ಅದರ ಪರಿಣಾಮವಾಗಿ ಆದ ಪುಸ್ತಕವು ಯಾವುದೇ ಅದ್ಭುತ ಕಾರ್ಯದ ಸತ್ಯತೆಯನ್ನು ತಿರಸ್ಕರಿಸಲಿಲ್ಲ. ಚಕ್ರವರ್ತಿಯಾದ ಜೂಲಿಯೆಸ್‌ನು (ಸ್ವಧರ್ಮ ಭ್ರಷ್ಠ ಜೂಲಿಯಸ್) ಕ್ರೈಸ್ತತ್ವವನ್ನು ಅಳಿಸಿ ಹಾಕಲು ತನ್ನ ಎಲ್ಲಾ ಬಲವನ್ನು ಉಪಯೋಗಿಸಿದನು. 361ರಲ್ಲಿ, ಅವನು ಯೇಸುವಿನ ಧರ್ಮದ ಮೇಲೆ ತನ್ನ ಬರಹಗಳಲ್ಲಿ ದಾಳಿ ಮಾಡಿದನು. ಯಾವುದೇ ಅದ್ಭುತ ಕಾರ್ಯವನ್ನು ಅವನು ಅಲ್ಲಗಳೆಯಲಿಲ್ಲ. ಆದರೆ ಯೇಸು ಜನರನ್ನು ಗುಣಪಡಿಸಿದನು, ದೆವ್ವಗಳನ್ನು ಬಿಡಿಸಿದನು

ಹಾಗೂ ನೀರಿನ ಮೇಲೆ ನಡೆದನು ಎಂದು ಒಪ್ಪಿಕೊಂಡನು.

ಮೊದಲಿನ ಯೆಹೂದಿ ಮತ್ತು ಅನ್ಯ ಜನಾಂಗದ ಅವಿಶ್ವಾಸಿಗಳು ಯೇಸುವಿನ ಧರ್ಮಕ್ಕೆ ಆಧಾರವಾಗಿರುವ ಯೇಸುವನ್ನು ಬಹಿರಂಗ ಪಡಿಸಲು ಸಂತೋಷವುಳ್ಳವರಾಗಿದ್ದರು. ಈ ಟೀಕಾಕಾರರು ಆತನ ಅದ್ಭುತ ಕಾರ್ಯಗಳಿಗೆ ವಿರೋಧವಾಗಿ ಏನನ್ನೂ ಹೇಳದಿರುವುದು ಅವರ ಯಥಾರ್ಥತೆಗೆ ಮೌನವಾದ, ಮನಸ್ಸಿಲ್ಲದ ಮತ್ತು ಬಲವಾದ ಸಾಕ್ಷಿಯಾಗಿದೆ.

**ಯೇಸುವಿನ ಜೀವನವನ್ನು ವಿವರಿಸಲು ಅದ್ಭುತ ಕಾರ್ಯಗಳು ಅವಶ್ಯವಾಗಿವೆ**

ಬೈಬಲಿನ ಅದ್ಭುತ ಕಾರ್ಯಗಳ ಸತ್ಯತೆಯನ್ನು ಸ್ವೀಕರಿಸುವದಕ್ಕಾಗಿ ನಾಲ್ಕನೆಯ ಬಲವಾದ ಕಾರಣವು ಕೇವಲ ನೈಸರ್ಗಿಕ ಗ್ರಹಿಕೆಗಳ ಮೇಲೆ ಯೇಸುವಿನ ಜೀವನವನ್ನು ವಿವರಿಸಲಾಗದು ಎಂಬ ಸಂಗತಿಯು ಯೇಸುವಿನ ಜೀವನವನ್ನು ಅದ್ಭುತಕರವಾದದ್ದನ್ನು ಸ್ವಾಭಾವಿಕವಾದದ್ದರಿಂದ ಬೇರ್ಪಡಿಸಲು ಕೆಲವರು ಪ್ರಯತ್ನಿಸಿದ್ದಾರೆ ಆದರೆ ಅವರು ಯಶಸ್ವಿಯಾಗಿರುವದಿಲ್ಲ. ಅವೆರಡೂ ಇಡೀಯಾಗಿ ಸಾಮರಸ್ಯದಲ್ಲಿ ಒಂದಾಗಿ ಕೂಡಿಸಲ್ಪಟ್ಟಿವೆ. ಒಂದಿಲ್ಲದೇ ಇನ್ನೊಂದು ಒಳ್ಳೇ ಅರ್ಥ ಕೊಡುವದಿಲ್ಲ.

ಯೇಸುವಿನ ಜೀವನದ ಭಾಗವು ಆತನ ಅದ್ಭುತಕರವಾದ ಶಕ್ತಿಗೆ ಆತನ ವಿರೋಧವಾದ ಪ್ರತಿಕ್ರಿಯೆಯ ಭಾಗವಾಗಿತ್ತು. ಆತನಿಗೆ ಅವರ ಉತ್ತರವು ಆತನು ಅಶುದ್ಧ ಆತ್ಮಗಳನ್ನು.ಹೊರಗೆ ಹಾಕಿರದಿದ್ದರೆ ಒಳ್ಳೇ ಅರ್ಥವನ್ನು ಮಾಡುವದಿಲ್ಲ.

ಯೇಸು ಜ್ವರದಿಂದ ಬಳಲುತ್ತಿರುವ ಹೆಣ್ಣುಮಗಳನ್ನು ಕೈಯಿಂದ ಹಿಡಿದು ಎಬ್ಬಿಸಿದನು; ಆಕೆಯ ಜ್ವರವನ್ನು ತೆಗೆದು ಹಾಕಿದನು. ಆಕೆ ಕೂಡಲೇ ಉಪಚಾರಮಾಡಿದಳು. ಅದ್ಭುತ ಕಾರ್ಯದಲ್ಲಿ ಸ್ವಾಭಾವಿಕವಾದದ್ದರೊಂದಿಗೆ ಕರಗಿ ಹೋಗುತ್ತದೆ.

ದೊಡ್ಡ ಗುಂಪುಗಳು ಯೇಸುವನ್ನು ಹಿಂಬಾಲಿಸಿದವು. ಜನ ಸಮೂಹಗಳ ಮೇಲೆ ಆತನ ಪ್ರಭಾವವನ್ನು ಆತನ ಅದ್ಭುತ ಕಾರ್ಯಗಳೊಂದಿಗೆ ಅರ್ಥಮಾಡಿಕೊಳ್ಳಬಹುದು. ಆದರೆ ಅವುಗಳಿಲ್ಲದೇ ಜನರನ್ನು ಸಳೆಯುವ ಅಂಥ ಶಕ್ತಿಯು ಒಂದು ಸಮಸ್ಯೆ ಆಗುತ್ತದೆ. ಹಾಗೂ ಜಗತ್ತಿನ ಅತ್ಯುತ್ತಮ ಮನುಷ್ಯನು ಮೋಸಗಾರನೆಂದು ಚಿತ್ರಿಸಬೇಕಾಗುತ್ತದೆ.

ಯೇಸುವಿನ ಸೇವೆಯ ಒಂದು ಮಹತ್ವದ ಭಾಗವು ಆತನಲ್ಲಿ ಆತನ ಅಪೊಸ್ತಲರು ಇಟ್ಟಿದ್ದ ವಿಶ್ವಾಸವಾಗಿತ್ತು. ಆ ವಿಶ್ವಾಸವು ಆತನು ಕಪಟವೇಶಧಾರಿಯಾಗಿದ್ದರೆ ವಿವರಿಸಲಿಕ್ಕಾಗದಂಥದ್ದಾಗುತ್ತದೆ. ಯಾಕಂದರೆ ವ್ಯವಹಾರದ ರಹಸ್ಯಗಳನ್ನು ಅವರಿಗೆ ಮಾತ್ರ ವಿವರಿಸುತ್ತಿದ್ದನು. ಮೂರು ವರ್ಷಗಳ ವರೆಗೆ ಆತನನ್ನು ಹಿಂಬಾಲಿಸಿದ ನಂತರ ಆತನ ಅದ್ಭುತ ಕಾರ್ಯಗಳು ನಿಜವಾದವುಗಳು ಎಂದು ಅವರು ನಂಬಿದರು.

## ಮುಕ್ತಾಯ

ಬೈಬಲಿನ ಅದ್ಭುತ ಕಾರ್ಯಗಳ ಸಮಸ್ಯೆಯ ಬಗ್ಗೆ ಯಾವುದೇ ಚರ್ಚೆಯು ಎಲ್ಲಾ ಅದ್ಭುತ ಕಾರ್ಯಗಳಲ್ಲಿ ಅತೀ ದೊಡ್ಡದಾದ, ಅಂದರೆ ಯೇಸು ಕ್ರಿಸ್ತನ ಪುನರುತ್ಥಾನದ ಬಗ್ಗೆ ಯೋಚಿಸದಿದ್ದರೆ ಸಂಪೂರ್ಣವಾಗಲಾರದು. ಈ ಅದ್ಭುತ ಕಾರ್ಯದ ಮೇಲಿನ ಪಾಠವು ಮುಂದೆ ಬರುತ್ತದೆ. ದಯವಿಟ್ಟು ಅದನ್ನು ಗಮನವಿಟ್ಟು, ಪ್ರಾರ್ಥನಾ ಪೂರ್ವಕವಾಗಿ ಯೋಚಿಸಿರಿ.

---

ಟಿಪ್ಪಣಿಗಳು

[1]David Hume, *An Enquiry Concerning the Human Understanding, and an Enquiry Concerning the Principles of Morals*, ed. L. A. Selby-Bigge (Oxford: Clarendon Press, 1894), 120. [2]Ibid., 127. [3]Ibid., 127-28. [4]Ibid., 128-29. [5]Ibid., 115-16.

# ಅತೀ ದೊಡ್ಡ ಅದ್ಭುತ ಕಾರ್ಯ: ಯೇಸುವಿನ ಪುನರುತ್ಥಾನ

ಒಂದು ದೃಷ್ಟಿಕೋನದಿಂದ ಒಂದು ಅದ್ಭುತ ಕಾರ್ಯವು ಇನ್ನೊಂದರಂತೆ ಕಠಿಣವಾದದ್ದೂ ಮತ್ತು ಒಂದು ಅದ್ಭುತ ಕಾರ್ಯವು ಇನ್ನೊಂದರಂತೆ ಸುಲಭವಾದದ್ದೂ ಆಗಿವೆ. ಮಾನವಾತೀತ ಶಕ್ತಿಯು ಪ್ರತಿಯೊಂದಕ್ಕೂ ಅಗತ್ಯವಾಗಿದೆ. ಹೀಗಿದ್ದರೂ ಇನ್ನೊಂದು ದೃಷ್ಟಿಯಿಂದ ಬೈಬಲಿನಲ್ಲಿ ದಾಖಲೆಯಾದ ಪ್ರತಿಯೊಂದು ಅದ್ಭುತ ಕಾರ್ಯವು ಯೇಸುವಿನ ದೇಹದ ಪುನರುತ್ಥಾನಕ್ಕಿಂತ ಕಡಿಮೆ ಪರಿಣಾಮ ಕಾರಿಯಾದದ್ದಾಗಿವೆ. ಆತನ ಮೇಲೆ ಇನ್ನು ಮುಂದೆ ಮರಣದ ಅಧಿಕಾರವಿರುವದಿಲ್ಲ. ಯೇಸು ಎಬ್ಬಿಸಲ್ಪಟ್ಟ ಅದ್ಭುತ ಕಾರ್ಯವು ಪ್ರಮಾಣಗಳಿಂದ ಸಿದ್ಧಪಡಿಸಲ್ಪಟ್ಟರೆ, ನಿಶ್ಚಯವಾಗಿಯೂ ಇತರ ಎಲ್ಲಾ ಬೈಬಲಿನ ಅದ್ಭುತ ಕಾರ್ಯಗಳು ವಿಶ್ವಾಸಕ್ಕೆ ಅರ್ಹತೆಯುಳ್ಳವುಗಳು ಆಗುತ್ತವೆ. ಆದುದರಿಂದ ಯೇಸುವಿನ ಪುನರುತ್ಥಾನದ ಪರಿಣಾಮಗಳು ಬಹಳ ಮಹತ್ವದವುಗಳಾಗಿವೆ. ಬೈಬಲಿನ ಎಲ್ಲಾ ಅದ್ಭುತ ಕರವಾಗಿರುವ ಪುರಾವೆಯು ಪುನರುತ್ಥಾನದ ರುಜುವಾತಿನೊಂದಿಗೆ ನಿಲ್ಲ ಬಹುದು ಇಲ್ಲವೇ ರುಜುವಾತಾಗದೇ ಬಿದ್ದು ಹೋಗಬಹುದು ಎಂದು ಹೇಳಬಹುದು. ಹೀಗಿರುವದರಿಂದ, ಯೇಸುವು ಹೂಣಲ್ಪಟ್ಟ ಮೂರನೆಯ ದಿನದಲ್ಲಿ ಏನು ಸಂಭವಿಸಿತು ಎಂಬುದರ ವಿಶೇಷ ಅದ್ಯಯನವು ಸಾಮಾನ್ಯವಾಗಿ ಬೈಬಲಿನ ಅದ್ಭುತಗಳನ್ನು ಸಿದ್ಧಪಡಿಸಿ ತೋರಿಸಲಿಕ್ಕೆ ಇಲ್ಲವೇ ತಪ್ಪು ಹೊರಿಸಲಿಕ್ಕೆ ಸಹಜವಾದ ಮತ್ತು ನೇರವಾದ ಮಾರ್ಗವಾಗಿದೆ.

## ಆತನು ಎಬ್ಬಿಸಲ್ಪಟ್ಟಿರದಿದ್ದರೆ

ಯೇಸುವು ಎಬ್ಬಿಸಲ್ಪಟ್ಟಿರದಿದ್ದರೆ ಆತನ ದೇಹಕ್ಕೆ ಏನು ಸಂಭವಿಸಿತು ಎಂಬುದಕ್ಕೆ ಆರು ಸಾಧ್ಯವಾದ ವಿವರಣೆಗಳನ್ನು ಒಂದು ಸಮೀಕ್ಷೆಯು ತೋರಿಸುತ್ತದೆ.

(1) *ಯೇಸುವಿನ ಶಿಷ್ಯರಿಂದ ದೇಹವು ರದ್ದುಕೊಳ್ಳಲ್ಪಟ್ಟಿತು.* ಯೇಸುವಿನ ದೇಹವು ಆತನ ಶಿಷ್ಯರಿಂದ ರದ್ದು ಒಯ್ಯಲ್ಪಟ್ಟಿತು ಎಂಬುದು ಅವಿಶ್ವಾಸಿಗಳ ಅತೀ ಮೊದಲಿನ ಸಿದ್ಧಾಂತವಾಗಿತ್ತು. ಸಮಾಧಿಯನ್ನು ಕಾಯುತ್ತಿದ್ದ ಸಿಪಾಯಿಗಳ ಬಾಯಿಯಲ್ಲಿ ಯೆಹೂದ್ಯರ ಮಹಾ ಯಾಜಕರು ಈ ಸಿದ್ಧಾಂತವನ್ನು ಹಾಕಿದರು (ನೋಡಿರಿ. ಮತ್ತಾಯ 28:1-15). ಕಾಯುತ್ತಿದ್ದ ಪ್ರತಿಯೊಬ್ಬ ಸಿಪಾಯಿ ಮಲಗಿ ನಿದ್ರೆಹೋದನು. ಆದರೆ ಅವರು ನಿದ್ರಿಸುತ್ತಿದ್ದಾಗ ಏನಾಯಿತು ಎಂಬುದಕ್ಕೆ ಅವರು ಸಾಕ್ಷಿಕೊಡಬಹದೋ ಎಂದು ಸಿದ್ಧಾಂತವು ಪ್ರಶ್ನಿಸುತ್ತದೆ. ಅಲ್ಲದೇ ಕದಿಯಲಿಕ್ಕೆ ಬಂದ ಶಿಷ್ಯರು ಯೇಸುವಿನ ಶವ ಬಟ್ಟೆಯನ್ನು ತೆಗೆದು ಹಾಕಲು, ಅವುಗಳನ್ನು ಒಂದು ಸ್ಥಳದಲ್ಲಿಡಲು, ಆತನ ತಲೆಯ ಕೈಪಾವುಡವನ್ನು ತೆಗೆದಿಡಲು, ಅದನ್ನು ಮಡಚಿ ಖಾಲಿಯಾದ ಸಮಾಧಿಯಲ್ಲಿ ಒಂದು ಕಡೆ ಇಡಲು ಸಮಯ ತೆಗೆದು ಕೊಂಡರು ಎಂದರ್ಥವಾಗುತ್ತದೆ. ಈ ಸಿದ್ಧಾಂತವು ಯೇಸುವಿನ ಶಿಷ್ಯರು, ಜನರು ಸತ್ಯವಂತರಾಗಿರತಕ್ಕದ್ದು, ಮೋಸಗಾರರಾರಬೇಕು ಎಂದು

ಒತ್ತಾಯ ಮಾಡುತ್ತಾ ಹೋಗುವವರಂತಿದ್ದಾರೆ.

(2) *ಮೂರ್ಛೆ ಹೋದ ಸಿದ್ಧಾಂತ.* ಎರಡನೆಯ ಸಿದ್ಧಾಂತವು ಯೇಸುವು ಎಂದೂ ಸಾಯಲಿಲ್ಲ, ಆದರೆ ಕೇವಲ ಮೂರ್ಛೆ ಹೋಗಿದ್ದನೆಂದು ಹೇಳುತ್ತದೆ. ಆಮೇಲೆ, ಎಚ್ಚತ್ತುಕೊಂಡು, ಆತನು ಜನರಿಗೆ ತಾನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದೇನೆ ಎಂದು ಹೇಳಿದನು. ಅಂಥ ಸಿದ್ಧಾಂತವು ಶಿಲುಬೆಯ ಮೇಲೆ ನೇರವಾಗಿ ಆರು ತಾಸುಗಳ ಕಠಿಣ ಶ್ರಮೆಹೊಂದಿದ ತರುವಾಯ, ಒಬ್ಬ ಸಿಪಾಯಿಯ ಈಟಿಯ ತಿವಿಯುವಿಕೆಯ ನಂತರ, ಹಾಗೂ ಮುದ್ರೆ ಹಾಕಿದ ಸಮಾಧಿಯೊಳಗಿನ ಮೂರು ದಿನಗಳ ನಂತರ ಯೇಸು ಸಜೀವಿಯಾಗಿ ಉಳಿದಿದ್ದನು ಎಂದು ಊಹಿಸುತ್ತದೆ ಗಾಯ ಗೊಂಡ ರಕ್ತಸುರಿಯುತ್ತಿದ್ದ ಯೇಸು ಆಹಾರವಿಲ್ಲದೇ ಮೂರು ದಿನಗಳ ನಂತರ ತನ್ನ ಮೂರ್ಛೆಯಿಂದ ಎಚ್ಚತ್ತುಕೊಂಡು, ತನ್ನ ಶವ ಬಟ್ಟೆಯನ್ನು ತೆಗೆದು ಹಾಕಿ, ಕೈಪಾವುಡವನ್ನು ತೆಗೆದಿಟ್ಟನು. “ಬಹಳ ದೊಡ್ಡದಾದ” (ಮಾರ್ಕ 16:4) ಕಲ್ಲನ್ನು ಉರುಳಿಸಿದನು. ಕಾವಲುಗಾರರಿಂದ ತಪ್ಪಿಸಿಕೊಂಡನು ಹಾಗೂ ಎಮ್ಮಾಹುವಿಗೆ ಹದಿನೈದು ಮೈಲು ದೂರ ನಡೆದು ಹೋಗಿ ಪುನಃ ಹಿಂದಿರುಗಿ ಬಂದನು ಎಂದು ಈ ಸಿದ್ಧಾಂತವು ಹೇಳುತ್ತವೆ.

ನಿಜವಾಗಿಯೂ ಯೇಸುವಿನ ಮರಣದ ಬಗ್ಗೆ ಶತಾಧಿಪತಿಯು ಶಿಫಾರಸು ಮಾಡುವ ವರೆಗೆ ಪಿಲಾತನು ದೇಹದ ಬಿಡುಗಡೆ ಮಾಡಿರಲಿಲ್ಲ. ಅಲ್ಲದೇ ಯೇಸುವು ನಿಜವಾಗಿಯೂ ಸತ್ತು ಹೋಗಿದ್ದಾನೆಂದು ಯೆಹೂದ್ಯರು ನಂಬಿದ್ದರು.

(3) *ಯೇಸುವಿನ ವೈರಿಗಳಿಂದ ದೇಹವು ಕದಿಯಲ್ಪಟ್ಟಿತು.* ಯೇಸುವಿನ ದೇಹವು ಆತನ ವೈರಿಗಳಿಂದ ಕದಿಯಲ್ಪಟ್ಟಿತೆಂದು ಮೂರನೆಯ ಸಿದ್ಧಾಂತವು ಪ್ರತಿಪಾದಿಸುತ್ತದೆ. ಇದು ಸತ್ಯವಾಗಿದ್ದರೆ, ಕ್ರೈಸ್ತತ್ವವು ಬಹಳ ದಿನಗಳ ವರೆಗೆ ಉಳಿಯುತ್ತಿರಲಿಲ್ಲ. ಯೇಸುವು ಸತ್ತವನಾಗಿಯೇ ಉಳಿದಿದ್ದಾನೆ ಎಂಬ ರುಜುವಾತಾಗಿ ಆತನ ಶವವನ್ನು ತೋರಿಸಿದ್ದರೆ ನೂತನ ಧರ್ಮವು ಮರಣಾಂತಿಕ ಪೆಟ್ಟನ್ನು ಹೊಂದು ಕೊಳ್ಳಬಹುದಿತ್ತು.

(4) *ಭ್ರಮೆ.* ಹೆಚ್ಚಾದ ಅವಿಶ್ವಾಸಿಗಳಿಂದ ಸ್ವೀಕರಿಸಲ್ಪಟ್ಟ ನಾಲ್ಕನೆಯ ಸಿದ್ಧಾಂತವು ಯೇಸುವಿನ ಶಿಷ್ಯರು ಭ್ರಮೆಗೊಳಗಾದರು ಎಂಬುದು. ಯೇಸುವನ್ನು ಪುನಃ ನೋಡ ಬೇಕೆಂದು ಅವರು ಬಯಸಿದ್ದರು ಮತ್ತು ಹಾಗೆ ನೋಡಿದೆವೆಂದು ಭ್ರಮಿಸಿದರು. ಇದಕ್ಕೆ ವಿರುದ್ಧವಾಗಿ ಆತನ ಶಿಷ್ಯರು ಆತನನ್ನು ಪುನಃ ನೋಡುವದನ್ನು ನಿರೀಕ್ಷಿಸಿರಲಿಲ್ಲ. ಪುನರುತ್ಥಾನದ ಬಗ್ಗೆ ಮೊದಲು ಕೇಳಿದಾಗ ಅವರನ್ನು ನಂಬಲಿಲ್ಲ. ನಿಜವಾಗಿಯೂ ಅವರು ಮೊದಲನೆಯ ಅವಿಶ್ವಾಸಿಗಳಾಗಿದ್ದರು. ಆದರೆ ಅವರ ಅಪನಂಬಿಕೆಯಲ್ಲಿ ಅವರು ಯಥಾರ್ಥವಾಗಿದ್ದರು. ಸಂಶಯ ಪಡುವ ಭಾವನೆಯಲ್ಲಿ ಇರುವ ವ್ಯಕ್ತಿಯು ಭ್ರಮೆಗೊಳ್ಳುವದಕ್ಕೆ ಬಲಿಯಾಗಲಾರನು. ಒಂದು ವೇಳೆ ಶಿಷ್ಯರು ಅಂಥ ಭ್ರಮೆಗೆ ಬಲಿಪಶುಗಳಾಗಿದ್ದರೆ ಹಲವಾರು ಸಂಗತಿಗಳು ವಿವರಿಸಲ್ಪಡದೇ ಉಳಿಯುತ್ತವೆ. ಭ್ರಮೆಯ ಸಿದ್ಧಾಂತವು ಖಾಲಿಯಾದ ಸಮಾಧಿಗಾಗಿ ಕಾರಣವನ್ನೊದಗಿಸುವದಿಲ್ಲ. ಸಮುದ್ರದ ಬಳಿಯಲ್ಲಿ ರೊಟ್ಟಿಯನ್ನು ಮೀನನ್ನು ತಿಂದದ್ದನ್ನು ಇಲ್ಲವೇ ಐದುನೂರು ಜನರಿಗೆ ಒಂದೇ ಭ್ರಮೆಯಾದದ್ದು ಯಾಕೆ ಎಂಬುದನ್ನು ಅದು ವಿವರಿಸುವದಿಲ್ಲ. ಇದಲ್ಲದೇ ಎರಡು ತಿಂಗಳುಗಳಿಗಿಂತ ಕಡಿಮೆ ಅವಧಿಯಲ್ಲಿ ಮೂರು ಸಾವಿರ ಜನರು ಹೇಗೆ ವಿಶ್ವಾಸಿಗಳಾಗಿ ಮಾಡಲ್ಪಟ್ಟರು ಇಲ್ಲವೇ ಯೇಸುವಿನ ಪ್ರತ್ಯಕ್ಷತೆಗಳು ನಿಂತು ಹೋದರೂ ಆತನ ಪುನರುತ್ಥಾನದ ನಂಬಿಕೆಯು ಯಾಕೆ ಸ್ಥಿರವಾದದ್ದಾಗಿತ್ತು ಎಂಬುದನ್ನು ಅದು ಯೋಚಿಸುವದಿಲ್ಲ.

(5) *ಮಾನಸಿಕ ಪುನರುತ್ಥಾನ.* ಯೇಸುವಿನ ದೇಹವು ಸತ್ತದ್ದಾಗಿಯೇ ಉಳಿಯಿತು, ಆದರೆ ಆತನ ಶಿಷ್ಯರು ಯೇಸುವನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಆತನ ಬೋಧನೆಗೆ

ಅನುಸಾರವಾಗಿ ಜೀವಿಸಿದ್ದರಿಂದ, ಅವರಿಗೆ ಯೇಸುವು ಇನ್ನೂ ಜೀವಿಸುವವನಾಗಿದ್ದಾನೆ ಎಂದು ಐದನೆಯ ಸಿದ್ಧಾಂತವು ಹೇಳುತ್ತದೆ. ಈ ರೀತಿಯಲ್ಲಿ ಜನರ ಹೃದಯದಲ್ಲಿ ಯೇಸು ಎಬ್ಬಿಸಲ್ಪಟ್ಟವನಾಗಿ ಜೀವಿಸುವನು ಎಂದು ಅವರು ಮಾತಾಡುವವರಾದರು. ಈ ಸಿದ್ಧಾಂತದ ಪ್ರಕಾರ, ಪುನರುತ್ಥಾನವು ಕೇವಲ ಮಾನಸಿಕವಾದದ್ದು ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಹೀಗಿದ್ದರೂ ಈ ಸಿದ್ಧಾಂತವು ಖಾಲಿಯಾದ ಸಮಾಧಿಯನ್ನು ವಿವರಿಸುವದರಲ್ಲಿ ಸೋತುಹೋಗುತ್ತದೆ. ದುಃಖಾಕ್ರಾಂತರಾಗಿದ್ದ ಶಿಷ್ಯರು ತಾವು ಪುನರುತ್ಥಾನವಾದ ಯೇಸುವನ್ನು ಮುಟ್ಟಿದೆವೆಂದು ಸಾಕ್ಷಿಕೊಟ್ಟರು. ಕ್ರಿಸ್ತನಿಗಾಗಿ ಭರವಸೆಯುಳ್ಳ ಹತಸಾಕ್ಷಿಗಳಾಗಲು ತಕ್ಷಣದ ಬದಲಾವಣೆ ಹೊಂದಿದ್ದನ್ನು ವಿವರಿಸುವದರಲ್ಲಿ ಅದು ಸೋತುಹೋಗುತ್ತದೆ.

(6) *ಆತ್ಮನ ವಾಸ್ತವವಾದ ದರ್ಶನ.* ಮಾನಸಿಕ ಪುನರುತ್ಥಾನದ ಸಿದ್ಧಾಂತಕ್ಕೆ ವ್ಯತ್ಯಾಸವಾದ ಒಂದು ಸಿದ್ಧಾಂತವು ಶಿಷ್ಯರು ನಿಜವಾಗಿಯೂ ಯೇಸುವಿನ ದೇಹವು ಎಬ್ಬಿಸಲ್ಪಟ್ಟಿರುವದಿಲ್ಲವಾದರೂ ಆತನ ಮಹಿಮೆಯುಳ್ಳ ಆತ್ಮವನ್ನು ನೋಡಿದರು ಎಂಬುದಾಗಿದೆ. ನಂಬದೇ ಇದ್ದ ಶಿಷ್ಯರು ಕೂಡಲೇ ನಂಬುವವರಾಗಿ ಪರಿವರ್ತನೆ ಗೊಂಡದ್ದು ಯಾಕೆ ಎಂಬುದನ್ನು ವಿವರಿಸುವದರ ಅವಸರದ ಅವಶ್ಯಕತೆಯ ನಿಮಿತ್ತ ವಾಗಿ ಈ ಸಿದ್ಧಾಂತವು ಹುಟ್ಟಿ ಬಂದಿತು.

ಹೀಗಿದ್ದರೂ, ಈ ಸಿದ್ಧಾಂತದ ಬಲಹೀನತೆಯು ಒಂದು ಅದ್ಭುತವನ್ನು ಇನ್ನೊಂದು ಅದ್ಭುತಕ್ಕಾಗಿ ಪರ್ಯಾಯವಾಗಿ ಇಡುವಂಥದ್ದಾಗಿದೆ: ದೈಹಿಕ ಪುನರುತ್ಥಾನದಲ್ಲಿ ನಂಬಿಕೆಯಿಡುವುದು ಕಠಿಣವಾಗಿರುವಾಗ ಆತ್ಮವು ಕಾಣಿಸಿಕೊಳ್ಳುವುದರಲ್ಲಿ ನಂಬುವುದು ಅಷ್ಟೇ ಕಠಿಣವಾದದ್ದಾಗಿದೆ. ಇದಲ್ಲದೇ ಈ ಸಿದ್ಧಾಂತವು ಸಮಾಧಿಯು ಹೇಗೆ ಖಾಲಿಯಾಯಿತು ಎಂಬುದನ್ನು ವಿವರಿಸುವದಿಲ್ಲ. ಯೇಸು ತನ್ನ ದೇಹವನ್ನು ಮುಟ್ಟಲಿಕ್ಕೆ ಬಿಟ್ಟಿದ್ದನು ಹಾಗೂ ಆತನು ಕೇವಲ ಆತ್ಮವಾಗಿರಲಿಲ್ಲ ಎಂಬುದನ್ನು ಸ್ಥಿರಪಡಿಸಿ ತೋರಿಸಲು ಅವರೊಂದಿಗೆ ಊಟ ಮಾಡಿದ್ದನು.

## ಯೇಸುವಿನ ದೈಹಿಕ ಪುನರುತ್ಥಾನಕ್ಕೆ ಪುರಾವೆಗಳು

ಕನಿಷ್ಠ ಪಕ್ಷ ಪುರಾವೆಯ ಎಂಟು ವಿಷಯಗಳು ಮೂರು ದಿನಗಳ ನಂತರ ಯೇಸುವಿನ ದೇಹವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿತು ಎಂಬ ತೀರ್ಮಾನಕ್ಕೆ ನಡಿಸುತ್ತವೆ. (1) ತೆರೆದ ಸಮಾಧಿ, (2) ಖಾಲಿಯಾದ ಸಮಾಧಿ (3) ಶವ ವಸ್ತ್ರ, (4) ಚೋಡಿಸಿಟ್ಟ ತಲೆಯ ಮೇಲಿನ ಕೈಪಾವುಡ, (5) ಪ್ರತ್ಯಕ್ಷ ಸಾಕ್ಷಿಗಳು, (6) ಹೊಸ ಒಡಂಬಡಿಕೆಯ ವಿಶ್ವಾಸಾರ್ಹತೆ, (7) ಕ್ರೈಸ್ತತ್ವದ ಅಸ್ತಿತ್ವ, ಮತ್ತು (8) ಸ್ಮಾರಕಗಳು.

(1) *ತೆರೆದ ಸಮಾಧಿ.* ಸಮಾಧಿಯ ಬಾಗಿಲಿಗೆ ಉರುಳಿಸಿದ್ದ ದೊಡ್ಡ ಕಲ್ಲು ಹಾಗೂ ಸಮಾಧಿಯ ಮೇಲಿದ್ದ ಮುದ್ರೆಯೊಂದಿಗೆ ಸಮಾಧಿಯು ಹೇಗೆ ತೆರೆಯಲ್ಪಟ್ಟಿತು ಎಂಬ ಪ್ರಶ್ನೆಯು ಯೋಚಿಸಲ್ಪಡತಕ್ಕದ್ದು. ರೋಮನ್‌ರು ನಿಶ್ಚಯವಾಗಿಯೂ ಸಮಾಧಿಯನ್ನು ತೆರೆಯಲಿಲ್ಲ, ಯಾಕಂದರೆ ಸಮಾಧಿಯನ್ನು ತೆರೆಯದಂತೆ ನೋಡಿಕೊಳ್ಳಲು ಅವರು ನೇಮಿಸಲ್ಪಟ್ಟಿದ್ದರು. ಯೆಹೂದ್ಯರು ಖಂಡಿತವಾಗಿಯೂ ಸಮಾಧಿಯನ್ನು ತೆರೆಯಲಿಲ್ಲ. ಯಾಕಂದರೆ ಯಾವುದೇ ಮಧ್ಯಸ್ಥಗಾರರು ಬರಬಾರದೆಂದು ನಿಶ್ಚಿತ ಪಡಿಸಿಕೊಳ್ಳಲು ಕಾವಲುಗಾರರು ಬೇಕೆಂದು ಅವರು ಕೇಳಿಕೊಂಡಿದ್ದರು. ಶಿಷ್ಯರು ನಿಶ್ಚಯವಾಗಿಯೂ ಸಮಾಧಿಯನ್ನು ತೆರೆಯಲಿಲ್ಲ. ಯಾಕಂದರೆ ಅವರು ಕಾವಲುಗಾರರನ್ನು ಎದುರಿಸದವರಾಗಿದ್ದರು; ಹಾಗೆ ಮಾಡಲಾರದವರಾಗಿದ್ದರು. ಹೇ ಗೋ ಸಮಾಧಿಯು ತೆರೆಯಲ್ಪಟ್ಟಿತು. ಮತ್ತಾಯನ ಸುವಾರ್ತೆಯು ಹೇಳುವಂತೆ ಸಮಾಧಿಯ

ಕಲ್ಲನ್ನು ಉರುಳುಸದಿದ್ದರೆ, ಸಮಾಧಿಯನ್ನು ಯಾರು ತೆರೆದರು ಎಂಬ ಪ್ರಶ್ನೆಯು ಉತ್ತರವಿಲ್ಲದೇ ಉಳಿಯುತ್ತಿತ್ತು.

(2) *ಖಾಲಿಯಾದ ಸಮಾಧಿ.* ದೊಡ್ಡ ಕಲ್ಲನ್ನು ಉರುಳಿಸಿದ ಸಮಸ್ಯೆಯು ಯೋಚಿಸಲ್ಪಡತಕ್ಕದ್ದು ಅಷ್ಟೇ ಅಲ್ಲ, ಸಮಾಧಿಯು ಹೇಗೆ ಖಾಲಿಯಾಯಿತು ಎಂಬ ಇನ್ನೊಂದು ಮಹತ್ವದ ವಿಷಯವೂ ಯೋಚಿಸುವಂಥದ್ದಾಗಿದೆ. ಶವವನ್ನು ತೆಗೆದುಕೊಂಡು ಹೋಗಲು ರೋಮನ್ ಕಾವಲುಗಾರನು ಯಾಕೆ ಬಯಸಿದನು ಎಂಬುದಕ್ಕೆ ಕಾರಣವನ್ನು ಊಹಿಸಲಾಗದು. ದೇಹವು ಸಮಾಧಿಯಲ್ಲಿಯೇ ಇರಬೇಕೆಂದು ಯೆಹೂದ್ಯರು ಬಯಸಿದರು. ದೇಹವನ್ನು ಸಮಾಧಿಯಲ್ಲಿ ಇಟ್ಟವರು ಯೇಸುವಿನ ಶಿಷ್ಯರು: ಅದು ಅಲ್ಲಿರ ಬೇಕೆಂದು ಅವರು ಬಯಸಿದರು. ದೇಹವು ಅಲ್ಲಿಂದ ಒಯ್ಯಲ್ಪಡಬೇಕೆಂದು ಬಯಸಿದ್ದರೆ ಅವರು ಕಾವಲುಗರರನ್ನು ತಪ್ಪಿಸಿ ಕೊಳ್ಳಲಾಗುತ್ತಿರಲಿಲ್ಲ. ಯೇಸು ತನ್ನ ಸ್ವಂತ ದೈವಿಕ ಬಲದಿಂದ ಎದ್ದು, ಸಮಾಧಿಯಿಂದ ಹೊರಗೆ ನಡೆದು ಹೋಗಿರದಿದ್ದರೆ, ಸಮಾಧಿಯು ಹೇಗೆ ಬರಿದದ್ದಾಗಿ ಉಳಿಯಿತು ಎಂಬುದು ಉತ್ತರಿಸಲಾಗದ ಪ್ರಶ್ನೆಯಾಗುತ್ತದೆ.

(3) *ಶವ ವಸ್ತ್ರ.* ಐಶ್ವರ್ಯವಂತನು ಕೊಂಡುತಂದ ಶವದ ಉತ್ತಮ ನಾರುಬಟ್ಟೆಯು (a *sindon*) (ಉತ್ತಮವಾದ ಇಂಡಿಯನ್ ಬಟ್ಟೆ) ಸಮಾಧಿಯಲ್ಲಿ ಬಿಡಲ್ಪಟ್ಟಿತ್ತು. ಸಮಾಧಿಯ ಕಳ್ಳರು ದೇಹವನ್ನು ತೆಗೆದು ಕೊಂಡು ಹೋಗಿದ್ದರೆ, ಬಹು ಬೆಲೆಯುಳ್ಳ ನಾರು ಬಟ್ಟೆಯನ್ನು ತೆಗೆದು ಕೊಂಡು ಹೋಗಲು ಬಯಸುತ್ತಿದ್ದರು. ಕಳ್ಳತನದಿಂದ ಶಿಷ್ಯರು ಕಾವಲುಗಾರರ ಕಣ್ಣುತಪ್ಪಿಸಿ, ದೊಡ್ಡ ಕಲ್ಲನ್ನು ಉರುಳಿಸಿ, ದೇಹವನ್ನು ಕದ್ದುಕೊಂಡು ಹೋಗಿದ್ದರೆ ಯೇಸುವಿನ ದೇಹದಿಂದ ಶವ ವಸ್ತ್ರ ತೆಗೆದು ಹಾಕಲು ಯಾಕೆ ಸಮಯ ತೆಗೆದು ಕೊಂಡರು ಎಂಬುದನ್ನು ಊಹಿಸಲಿಕ್ಕಾಗುವದಿಲ್ಲ. ಯೇಸು ತಾನೇ ಶವ ವಸ್ತ್ರವನ್ನು ತೆಗೆದು ಹಾಕಿರದಿದ್ದರೆ ಅದು ಯಾಕೆ ಸಮಾಧಿಯಲ್ಲಿ ಬಿಡಲ್ಪಟ್ಟಿತು ಎಂಬುದು ಒಂದು ರಹಸ್ಯವಾಗಿ ಉಳಿಯುತ್ತದೆ.

(4) *ಜೋಡಿಸಿಟ್ಟ ತಲೆಯಮೇಲಿನ ಕೈಪಾವುಡ.* ಶವದ ಬಟ್ಟೆಯೊಂದಿಗಿರದೇ ತಲೆಯ ಕೈಪಾವುಡವು ಖಾಲಿಯಾದ ಸಮಾಧಿಯಲ್ಲಿ ಮಡಚಿ ಒಂದು ಕಡೆ ಇಡಲ್ಪಟ್ಟಿತ್ತು. ಅದು ಅವಸರದಲ್ಲಿ ಎಸೆಯಲ್ಪಟ್ಟಿರಲಿಲ್ಲ. ಅದು ಒಂದಾಗಿ ಮಡಚಿ ಇಡಲ್ಪಟ್ಟಿತ್ತು. ತಲೆಯ ಕೈಪಾವುಡವನ್ನು ತೆಗೆದವನು ಅವಸರದಲ್ಲಿರಲಿಲ್ಲ. ಹಾಗೂ ಅವನು ಕ್ರಮ ಬದ್ಧತೆಯುಳ್ಳವನಾಗಿದ್ದನು. ಸಮಾಧಿಕಳ್ಳರು - ಅವರು ಶಿಷ್ಯರಾಗಿರಲೀ, ಆಗಿರದಿರಲಿ, ತಲೆಯ ಕೈಪಾವುಡವನ್ನು ತೆಗೆದಿಡಲು ಸಮಯ ತೆಗೆದು ಕೊಳ್ಳುತ್ತಿರಲಿಲ್ಲ; ಅವರು ಹಾಗೆ ಮಾಡಿದ್ದರೂ ಅವಸರದಲ್ಲಿರುತ್ತಿದ್ದರು; ಇಷ್ಟು ಗಮನಕೊಡುತ್ತಿರಲಿಲ್ಲ. ಯೇಸುವು ತಾನೇ ಬೇಕೆಂತಲೇ ತೆಗೆದು ಹಾಕಿ ತಲೆಯ ಕೈಪಾವುಡವನ್ನು ಮಡಚಿ ಇಡದಿದ್ದರೆ, ಅದು ಯಾಕೆ ಪ್ರತ್ಯೇಕವಾಗಿ ಇಡಲ್ಪಟ್ಟಿತು ಹಾಗೂ ಮಡಚಿಟ್ಟ ಹಾಗೆಯೇ ಇತ್ತು ಎಂಬುದು ತಿಳಿದು ಬಂದಿರುವದಿಲ್ಲ.

(5) *ಪ್ರತ್ಯಕ್ಷ ದರ್ಶಿಗಳು.* ಯೇಸುವಿನ ಪುನರುತ್ಥಾನದ ನಂತರ ಅಪೊಸ್ತಲರು ಆತನೊಂದಿಗೆ ಊಟಮಾಡಿದರು, ತಮ್ಮ ಸ್ವಂತ ಕಣ್ಣುಗಳಿಂದ ಆತನನ್ನು ನೋಡಿ ದರು, ಆತನು ಮಾತಾಡುವದನ್ನು ಕೇಳಿಸಿಕೊಂಡರು ಮತ್ತು ಆತನೊಂದಿಗಿದ್ದರು ಎಂದು ಸಾಕ್ಷಿಕೊಟ್ಟರು. ಅವರು ಒಂದು ವೇಳೆ ಜಗತ್ತಿನ ಅತ್ಯುತ್ತಮ ವ್ಯಕ್ತಿಯಿಂದ ಮೋಸಪಡಿಸಲ್ಪಟ್ಟರು ಇಲ್ಲವೇ ಅವರು ಒಂದು ಕಥೆ ಕಟ್ಟಲು ರಹಸ್ಯ ಯೋಜನೆ ಮಾಡಿಕೊಂಡರು. ಅವರು ಆತನೊಂದಿಗಿದ್ದರೆ ಮತ್ತು ಆತನ ಗಾಯಗೊಂಡ ಕೈಗಳನ್ನೂ ಪಕ್ಕೆಯನ್ನೂ ನೋಡಿದ್ದರೆ, ಆತನು ಮಾತಾಡುವದನ್ನು ಕೇಳಿಸಿಕೊಂಡಿದ್ದರೆ ಅವರು ಮೋ ಸಹೊಂದಿರಲಿಕ್ಕಿಲ್ಲ. ಇನ್ನೊಂದು ದೃಷ್ಟಿಕೋನದಿಂದ, ಅವರು ಸುಳ್ಳನ್ನು ಬೇಕೆಂತಲೇ

ಹುಟ್ಟಿಸಿದ್ದರೆ ನೋವನ್ನು ಕೊಡುವ ಮನಸ್ಸಾಕ್ಷಿಗಳು ಅವರ ಬಹುಮಾನಗಳಾಗಿರುತ್ತಿದ್ದವು. ತಮ್ಮ ನಂಬಿಕೆಗಾಗಿ ಅವರು ದೈಹಿಕ ಕೊರತೆಗಳಿಂದ ಮತ್ತು ಕಠಿಣವಾದ ನಡಿಸುವಿಕೆಯ ಶ್ರಮೆ ಸಹಿಸಿಕೊಂಡರು, ಹಿಂಸಿಸಲ್ಪಟ್ಟರು, ನಿಂದಿಸಲ್ಪಟ್ಟರು. ನಿಜವಾಗಿಯೂ ಜಗತ್ತಿನ ಕಸವಾಗಿ, ಎಲ್ಲಾ ಸಂಗತಿಗಳ ಕೆಸರಾಗಿ ಕ್ರಿಸ್ತನ ನಿಮಿತ್ತವಾಗಿ ಹುಚ್ಚರಾದರು (1 ಕೊರಿಂಥ 4:10-13). ಸತ್ಯವನ್ನು ಮಾತಾಡಲು ಒತ್ತಾಯಿಸಲ್ಪಟ್ಟಾಗ ತಾವೇ ಸುಳ್ಳುಗಾರರೋ ಎಂಬಂತೆ ಕೆಲವು ಸಿದ್ಧಾಂತಗಳಲ್ಲಿರುವುದು ಅಪೊಸ್ತಲರು ತಮ್ಮ ಸಾಕ್ಷಿಗಳಲ್ಲಿ ಮೋಸ ಹೊಂದಿರದಿದ್ದರಿಂದ ಇಲ್ಲವೇ ಅಪ್ರಮಾಣಿಕರಾಗಿರದೇ ಇದ್ದುದರಿಂದ, ಉಳಿದದ್ದು ಒಂದೇ; ಅವರು ಸತ್ಯವನ್ನು ಹೇಳಿದರು. ಪ್ರತ್ಯಕ್ಷ ದರ್ಶಿಗಳಾಗಿ ಅಪೊಸ್ತಲರ ಸಾಕ್ಷಿಯು ದೈಹಿಕ ಪುನರುತ್ಥಾನಕ್ಕೆ ಬಲವಾದ ಪುರಾವೆಯಾಗಿದೆ.

(6) *ಹೊಸ ಒಡಂಬಡಿಕೆಯ ನಂಬಲರ್ಹತೆ.* ಲಿಖಿತ ದಾಖಲೆಗಳು ರಚಿಸಿದ ಹೊಸ ಒಡಂಬಡಿಕೆಯು ಕ್ರಿಸ್ತನ ದೈಹಿಕ ಪುನರುತ್ಥಾನಕ್ಕೆ ಸಾಕ್ಷಿಕೊಡುತ್ತದೆ. ಈ ಪುಸ್ತಕಗಳು ಚರಿತ್ರೆಯ ಬಹಳ ನಂಬಲರ್ಹವಾದ ಪುಸ್ತಕಗಳೆಂದು ಸ್ವೀಕರಿಸಲ್ಪಟ್ಟಿವೆ. ಇವುಗಳನ್ನು ಹಗುರವಾಗಿ ಯೋಚಿಸಲಿಕ್ಕಾಗುವದಿಲ್ಲ. ಇವು ತಾವೇ ಬಲವಾದ ಪುರಾವೆಯನ್ನು ಹೊಂದಿದೆ. ದೈಹಿಕ ಪುನರುತ್ಥಾನವು ಕಲ್ಪನೆಯಾಗಿದ್ದರೆ, ಅದು ವಿವರಿಸಲಿಕ್ಕಾಗದಂಥದ್ದು ಆಗಿದೆ. ಚೆನ್ನಾಗಿ ಸಾಕ್ಷಿಹೊಂದಿದ ಮತ್ತು ವಿಶ್ವಾಸಾರ್ಹತೆಗಳೊಂದಿಗಿರುವ ಗ್ರಂಥಗಳು ಜಗತ್ತಿನ ಅತೀ ದೊಡ್ಡ ಮೋಸದೊಂದಿಗೆ ಯಾಕೆ ಒಳಗೊಂಡಿದೆ ಎಂಬುದಕ್ಕೆ ಯಾವ ಅರ್ಥವಿರುವದಿಲ್ಲ. ಪುನರುತ್ಥಾನವು ಒಂದು ನಟನೆಯಾಗಿದ್ದರೆ ಈ ಇಪ್ಪತ್ತೇಳು ಪುಸ್ತಕಗಳು ಅಷ್ಟುಭರವಸೆಯನ್ನು ಹೊಂದಿರುವುದು ಹೇಗೆ ಎಂಬುದು ಉತ್ತರವಿಲ್ಲದ ಪ್ರಶ್ನೆಯಾಗಿದೆ.

(7) *ಕ್ರೈಸ್ತತ್ವದ ಅಸ್ತಿತ್ವ.* ಯೇಸುವಿನ ಪುನರುತ್ಥಾನವು ನಿಜವಾದದ್ದಾಗಿದ್ದರೆ, ಕ್ರೈಸ್ತತ್ವದ ಜನನ ಹಾಗೂ ಬೆಳವಣಿಗೆಯು ಸುಲಭವಾಗಿ ವಿವರಿಸಲ್ಪಡಬಹುದು. ಅದರ ನಾಯಕನು ಹೆಣವಾಗಿಯೇ ಉಳಿದುಕೊಂಡಿದ್ದರೆ, ಒಂದು ಧರ್ಮವನ್ನು ಮಿಲಿಯನ್‌ಗಟ್ಟಲೆ ಜನರು ಸ್ವೀಕರಿಸಿದ್ದು ವಿಚಿತ್ರವಾದದ್ದಾಗಿರುತ್ತದೆ. ಯೇಸುವಿನ ದೇಹವು ಸಮಾಧಿಯಿಂದ ಪುನರುತ್ಥಾನವಾದದ್ದರ ಮೇಲೆ ಅವಲಂಭಿಸಿರುವುದು ಒಂದೇ ಒಂದು ರೀತಿಯ ಧರ್ಮವಾಗಿದೆ. ಪುನರುತ್ಥಾನವಿಲ್ಲದಿದ್ದರೆ, ಕ್ರೈಸ್ತತ್ವವು ತನ್ನ ಹುಟ್ಟಿನಲ್ಲಿಯೇ ಸತ್ತು ಹೋಗುತ್ತಿತ್ತು.

(8) *ಸ್ಮಾರಕಗಳು.* ಯೇಸುವಿನ ಪುನರುತ್ಥಾನವು ನಿಜವಾಗಿದ್ದರೆ, ಆಗ ಕರ್ತನ ಭೋಜನ ಮತ್ತು ಕರ್ತನ ದಿನದ ಮಹತ್ವಕ್ಕೆ ಒಳ್ಳೇ ಅರ್ಥ ಬರುತ್ತದೆ. ದೈಹಿಕ ಪುನರುತ್ಥಾನವಿಲ್ಲದಿದ್ದರೆ ಈ ಸ್ಮಾರಕಗಳಿಗೆ ಯಾವ ಅರ್ಥವಿರುವದಿಲ್ಲ.

ದೈಹಿಕ ಪುನರುತ್ಥಾನವಿದ್ದರೆ, ಆಗ ಇಲ್ಲಿ ಯಾದಿ ಮಾಡಿದ ಪ್ರತಿಯೊಂದು ಪುರಾವೆಯನ್ನು ಸರಳ ಉತ್ತರವು ವಿವರಿಸುತ್ತದೆ. ಎಲ್ಲಾ ಘಟನೆಗಳೊಂದಿಗೆ ಬೇರೆ ಯಾವುದೇ ವಿವರಣೆಯು ಒಪ್ಪಿ ಕೊಳ್ಳುವದಿಲ್ಲ. ಇತರ ವಿವರಣೆಗಳು ಸಮಸ್ಯೆಗಳನ್ನು ಪರಿಹರಿಸುವದಕ್ಕಿಂತ ಹೆಚ್ಚಾದವುಗಳನ್ನು ಹುಟ್ಟಿಸುತ್ತವೆ. ಪ್ರಶ್ನೆಗಳನ್ನು, ಅನಿಶ್ಚಿತತೆಯನ್ನು ಹಾಗೂ ಗಲಿಬಿಲಿಯನ್ನು ಹಾಗೆಯೇ ಬಿಟ್ಟು ಬಿಡುತ್ತದೆ. ಈ ಎಂಟು ಪುರಾವೆಗಳು ಯೇಸುವಿನ ಪುನರುತ್ಥಾನದ ವಿಷಯದ ಮೇಲೆ ತೀರ್ಮಾನಿಸುವದಕ್ಕಾಗಿ ವಿಚಾರಿಸಲ್ಪಡತಕ್ಕದ್ದು.

## ಮುಕ್ತಾಯ

ಯೇಸುವು ಪುನರುತ್ಥಾನವಾಗಿರದಿದ್ದರೆ ಆತನ ದೇಹಕ್ಕೆ ಏನು ಸಂಭವಿಸುತ್ತಿತ್ತು ಎಂಬುದಕ್ಕೆ ಆರು ವಿವರಣೆಗಳನ್ನು ನೋಡಿದ್ದೇವೆ. ಪ್ರದರ್ಶಿಸುವದರಲ್ಲಿ ಕೊರತೆಯಿರುವದನ್ನು ಪರೀಕ್ಷೆಯು ತೋರಿಸುತ್ತದೆ ಹಾಗೂ ತೃಪ್ತಿಗೊಳಿಸುವದರಲ್ಲಿ

ಸೋತು ಹೋಗುತ್ತದೆ. ಯೇಸು ನಿಜವಾಗಿಯೂ ಸತ್ತವರೊಳಗಿಂದ ಎದ್ದು ಬಂದನು ಎಂಬ ತೀರ್ಪು ಮಾತ್ರವೇ ಎಲ್ಲಾ ಪುರಾವೆಯೊಂದಿಗೆ ಒಪ್ಪಿಕೊಳ್ಳುತ್ತದೆ ಹಾಗೂ ನಿರೀಕ್ಷೆಯನ್ನು ಕೊಡುತ್ತದೆ.

© 2009 Truth for Today